UNIVERSAL
LIBRARY
OU_198534
UNIVERSAL
LIBRARY

**OSMANIA UNIVERSITY LIBRARY**

Call No. K9232 I79 G  Accession No. K 4650

Author [illegible] B.

Title [illegible] 1953

This book should be returned on or before the date last marked below.

ಮಕ್ಕಳ ಮಂಟಪ - ಜೀವನ ಮಾಲೆ—೧

# ಗೋಪಾಲಕೃಷ್ಣ ಗೋಖಲೆ

ಮತ್ತು

# ಮೋತೀಲಾಲ ನೆಹರು

ಬರೆದವರು:

ಬಿ. ಈಶ್ವರ ಭಟ್ಟ

1953

ಪ್ರಕಾಶಕರು:

ಕನ್ನಡ ಪ್ರಪಂಚ ಪ್ರಕಾಶನ

ಕದ್ರಿ, ಮಂಗಳೂರು—2.

ಸಂಪಾದಕರು:

ಬಿ. ಶಂಕರ ಭಟ್ಟ

ಬಿ. ಎಮ್. ಶರ್ಮಾ

ಬೆಲೆ: ಆಣೆ ಐದು.

ಮುದ್ರಕರು:
ಕೆನರಾ ಪ್ರಿಂಟಿಂಗ್ ವರ್ಕ್ಸ್,
ಮಂಗಳೂರು— ೧.

ಮಾರಾಟಗಾರರು:
ದಿ ಇಂಡಿಯನ್ ಇಂಡಸ್ಟ್ರಿಯಲ್ಸ್
ಎಂಡ್ ಏಜನ್ಸೀಸ್,
ಮಂಗಳೂರು—೧.

# ಗೋಪಾಲಕೃಷ್ಣ ಗೋಖಲೆ

ಹಿಂದಿನ ಕಾಲದಿಂದ ಇಂದಿನ ವರೆಗೂ ನಮ್ಮ ದೇಶದಲ್ಲಿ ಅನೇಕ ಮಂದಿ ಮಹಾಪುರುಷರು ಹುಟ್ಟಿದರು; ದೇಶದ ಒಳ್ಳೆಯ ದಕ್ಕಾಗಿ, ಜನರ ಹಿತಕ್ಕಾಗಿ ಕೆಲಸಮಾಡಿದರು. ಇಂತಹರಿಂದ ನಮ್ಮ ದೇಶ ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಾ ಬಂದಿತು; ಹೆಸರು ಗಳಿಸಿತು. ಗೋಪಾಲಕೃಷ್ಣ ಗೋಖಲೆಯವರು ಇಂತಹ ಮಹಾಪುರುಷರಲ್ಲಿ ಒಬ್ಬರು. ದೇಶದ ಒಳ್ಳೆಯದಕ್ಕಾಗಿ, ಜನರ ಹಿತಕ್ಕಾಗಿ ತುಂಬಾ ಕೆಲಸಮಾಡಿದವರು; ದೇಶದ ಹೆಸರು ಹೆಚ್ಚಿಸಿ ಅಭಿವೃದ್ಧಿಗೆ ತಂದವರು.

ನಮ್ಮ ದೇಶದ ಮುಂಬಾಯಿ ಪ್ರಾಂತದಲ್ಲಿ ಸಮುದ್ರದ ಕರಾವಳಿಯಲ್ಲಿ ರತ್ನಗಿರಿ ಎಂಬುದೊಂದು ಜಿಲ್ಲೆ. ಆ ಜಿಲ್ಲೆಯಲ್ಲಿ ಕಟ್ಲುಕ್ ಎಂಬ ಹೆಸರಿನ ಒಂದು ಹಳ್ಳಿ. ಗೋಪಾಲಕೃಷ್ಣ ಗೋಖಲೆಯವರು ಈ ಹಳ್ಳಿಯಲ್ಲಿ 1866ನೆಯ ಇಸವಿ ಮೇ ತಿಂಗಳ ಒಂಬತ್ತನೆಯ ದಿನ ಹುಟ್ಟಿದರು.

ಗೋಪಾಲಕೃಷ್ಣ ಗೋಖಲೆಯವರು ಮಹಾರಾಷ್ಟ್ರ ಬ್ರಾಹ್ಮಣರು. ಅವರ ಮನೆಯವರು ಅಷ್ಟೊಂದು ಐಶ್ವರ್ಯವಂತರಲ್ಲ; ಆದರೂ ಗೌರವಸ್ಥರು. ಕೃಷ್ಣರಾವ್ ಗೋಖಲೆ ಗೋಪಾಲ ಕೃಷ್ಣ ಗೋಖಲೆಯವರ ತಂದೆ. ಅವರು ತುಂಬಾ ಉದಾರಿಗಳು; ಬಡವರ ಮೇಲೆ ಬಲು ಮಮತೆಯಿದ್ದವರು. ಅಲ್ಲದೆ ಧೈರ್ಯ ಶಾಲಿಗಳೂ ಆಗಿದ್ದರು. ಕಟ್ಲುಕ್ ಹಳ್ಳಿಯವರು ಅವರನ್ನು 'ಹುಲಿ ಕೃಷ್ಣರಾವ್' ಎಂದೇ ಕರೆಯುತ್ತಿದ್ದರು.

ಗೋಪಾಲಕೃಷ್ಣ ಗೋಖಲೆಯವರ ತಾಯಿಯ ಹೆಸರು ಸತ್ಯಭಾಮಾದೇವಿ. ಗಂಡನಂತೆಯೆ ಆಕೆಯೂ ನಯವಿನಯ

ಗಳಿಂದ ಕೂಡಿದವಳು; ಮಾನವಂತೆ; ಕರುಣಾಮಯಿಯಾದ ತಾಯಿ. ಸತ್ಯಭಾಮಾ ದೇವಿಗೆ ಗಂಡನ ಮೇಲೆ ಬಹಳ ಆದರ; ಮಕ್ಕಳ ಮೇಲೆ ಬಲು ಅಕ್ಕರೆ; ಬಡವರ ಮೇಲೆ ಪ್ರೀತಿ.

ಗೋಖಲೆಯವರು ತಮ್ಮ ಬಾಲ್ಯವನ್ನು ಹುಟ್ಟಿದ ಹಳ್ಳಿಯಲ್ಲಿಯೇ ಕಳೆದರು. ಮುಂದೆ ಅವರು ಹತ್ತು ವರ್ಷದ ಪ್ರಾಯದಲ್ಲಿ ಕೊಲ್ಲಾಪುರದ ಒಂದು ಶಾಲೆಗೆ ಸೇರಿದರು. ಶಾಲೆಯಲ್ಲಿ ಗೋಖಲೆಯವರು ಕಷ್ಟಪಟ್ಟು ಕಲಿಯುವ ವಿದ್ಯಾರ್ಥಿ; ಅಚ್ಚುಕಟ್ಟಾದ ಕೆಲಸ ಅವರದು. ಗೋಖಲೆಯವರ ಗುಣನಡತೆಗಳಿಂದಾಗಿ ಶಾಲೆಯಲ್ಲಿ ಎಲ್ಲ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಅವರನ್ನು ಪ್ರೀತಿಸುತ್ತಿದ್ದರು.

ಕೊಲ್ಲಾಪುರದಲ್ಲಿ ಕಲಿಯುತ್ತಿದ್ದಾಗಲೇ ಗೋಖಲೆಯವರ ತಂದೆ ತೀರಿಕೊಂಡರು. ಇದರಿಂದ ಗೋಖಲೆಯವರಿಗೆ ತುಂಬಾ ದುಃಖವಾದುದಲ್ಲದೆ, ಕಷ್ಟಗಳೂ ಉಂಟಾದುವು; ಬಡತನದ ಪೀಡೆ ಹೆಚ್ಚಿತು.

ಕೃಷ್ಣರಾವ್ ಗೋಖಲೆಯವರು ತೀರಿಹೋದ ಮೇಲೆ ಹತ್ತಿರದ ಸಂಬಂಧಿಕರೊಬ್ಬರು ಅವರ ಸಂಸಾರದ ಭಾರವನ್ನು ಹೊರಬೇಕಾಯಿತು. ಆ ಸಂಬಂಧಿಕರೂ ಅಷ್ಟೊಂದು ಐಶ್ವರ್ಯವಂತರಲ್ಲ. ಆದುದರಿಂದ ಗೋಪಾಲಕೃಷ್ಣರ ಅಣ್ಣಂದಿರಾದ ಗೋವಿಂದರಾವ್ ಗೋಖಲೆ ಜೀವನಕ್ಕಾಗಿ ಶಾಲೆಬಿಟ್ಟು ಕೆಲಸ ಹುಡುಕಬೇಕಾಯಿತು. ತಿಂಗಳಿಗೆ ಹದಿನೈದು ರೂಪಾಯಿ ವೇತನದ ಒಂದು ಚಿಕ್ಕ ಕೆಲಸ ಸಿಕ್ಕಿತು. ಅವರು ಆ ಹದಿನೈದು ರೂಪಾಯಿಗಳಲ್ಲಿ ಎಂಟು ರೂಪಾಯಿಗಳನ್ನು, ಶಾಲೆಯಲ್ಲಿ ಕಲಿಯುತ್ತಿದ್ದ ತನ್ನ ತಮ್ಮನಿಗೆ ಕಳುಹಿಸಿ ಕೊಡತೊಡಗಿದರು. ಅಷ್ಟೊಂದು ಉದಾರತೆ ಅವರದು. ಗೋಪಾಲಕೃಷ್ಣರೂ ತಮ್ಮ ಅಣ್ಣನನ್ನು

ತುಂಬಾ ಗೌರವಿಸುತ್ತಿದ್ದರು.

ಅಣ್ಣ ಕಳುಹಿಸುತ್ತಿದ್ದ ಎಂಟು ರೂಪಾಯಿಗಳಲ್ಲಿಯೇ ಗೋಪಾಲಕೃಷ್ಣ ಗೋಖಲೆ ದಿನಕಳೆಯಬೇಕು. ಊಟ, ಬಟ್ಟೆ, ಶಾಲೆಯ ಸಂಬಳ, ಪುಸ್ತಕ ಎಲ್ಲಾ ಅದರಿಂದಲೇ ಆಗಬೇಕು. ಎಷ್ಟೊಂದು ಕಷ್ಟ ಅದು! ಆದರೆ ಕಲಿಯುವುದರಲ್ಲಿಯೇ ಮನಸ್ಸು ಹಾಕಿದ್ದ ಗೋಖಲೆಯವರು ಯಾವ ಕಷ್ಟವನ್ನೂ ಲೆಕ್ಕಿಸಲಿಲ್ಲ. ಹೊಟ್ಟೆ ಬಟ್ಟೆಗಿಲ್ಲದಿದ್ದರೂ ಕಲಿಯುವುದರಲ್ಲಿ ಅವರು ಎಲ್ಲಾ ವಿದ್ಯಾರ್ಥಿಗಳಿಗೂ ಮುಂದೆ. ಬಾಲ್ಯದ ಈ ಕಷ್ಟಗಳು ಮುಂದೆ ಅವರನ್ನು ದೊಡ್ಡ ಮನುಷ್ಯರನ್ನಾಗಿ ಮಾಡಿದುವು. ಚಿಕ್ಕಂದಿನಲ್ಲಿ ಕಷ್ಟಗಳನ್ನು ಅನುಭವಿಸಿ ತಿಳಿದಿದ್ದುದರಿಂದಲೆ, ಮುಂದೆ ಅವರಿಗೆ ಬಡವರ ಕಷ್ಟಗಳ ಅರಿವಾಯಿತು; ಬಡವರ ಕಷ್ಟಗಳನ್ನು ಹೋಗಲಾಡಿಸುವುದಕ್ಕಾಗಿಯೇ ಗೋಖಲೆಯವರು ದುಡಿಯುವಂತಾಯಿತು.

ಗೋಪಾಲಕೃಷ್ಣ ಗೋಖಲೆ ಬಾಲ್ಯದಿಂದಲೇ ಸತ್ಯವಂತರು; ಏನಾದರೂ ಸುಳ್ಳು ಹೇಳದವರು. ಇದ್ದುದನ್ನು ಇದ್ದಂತೆ ನುಡಿದು ಬಿಡುವುದು ಅವರ ಸ್ವಭಾವ. ಒಮ್ಮೆ ಅವರ ಶಾಲೆಯಲ್ಲಿ ಒಂದು ಸಂಗತಿ ನಡೆಯಿತು. ಉಪಾಧ್ಯಾಯರು ಒಂದು ಲೆಕ್ಕ ಕೊಟ್ಟಿದ್ದರು. ತರಗತಿಯ ಯಾವ ವಿದ್ಯಾರ್ಥಿಯೂ ಆ ಲೆಕ್ಕ ಮಾಡಿರಲಿಲ್ಲ. ಆ ಲೆಕ್ಕ ಅಷ್ಟೊಂದು ಕಷ್ಟವಾಗಿತ್ತು. ಗೋಖಲೆಯವರು ಲೆಕ್ಕಮಾಡಿ ತಂದಿದ್ದರು; ಉಪ್ಯಾಧ್ಯಾಯರಿಗೆ ತೋರಿಸಿದರು. ಉಪಾಧ್ಯಾಯರು ಅವರನ್ನು ತುಂಬಾ ಹೊಗಳಿದರು. ಆದರೆ ಆ ಹೊಗಳಿಕೆಯಿಂದ ಗೋಖಲೆಯವರಿಗೆ ಏನೇನೂ ಸಂತೋಷವಾಗಲಿಲ್ಲ. ಸಂತೋಷದ ಬದಲಿಗೆ ಅವರಿಗೆ ದುಃಖವೇ ಆಯಿತು. ಹೊಗಳಿಕೆ ಕೇಳಿದರೆ ದುಃಖವೇಕೆ? ನಿಜವಾಗಿ ನೋಡಿದರೆ

ಗೋಖಲೆಯವರು ತನ್ನ ಸ್ವಂತ ಬುದ್ಧಿಶಕ್ತಿಯಿಂದ ಆ ಲೆಕ್ಕಮಾಡಿರಲಿಲ್ಲ. ಯಾರೊಡನೆಯೋ ಕೇಳಿ ಮಾಡಿದ್ದರು. "ಇನ್ನೊಬ್ಬರೊಡನೆ ಕೇಳಿಮಾಡಿದ ಲೆಕ್ಕವನ್ನು ನಾನೇ ಮಾಡಿದುದೆಂದು ಉಪಾಧ್ಯಾಯರೊಡನೆ ಸುಳ್ಳು ಹೇಳಿದೆನಲ್ಲಾ" ಎಂದೇ ಅವರಿಗಾದ ಬೇಸರ. ತನ್ನ ತಪ್ಪಿಗಾಗಿ ಕಣ್ಣೀರು ಸುರಿಸಿದರು. ಉಪಾಧ್ಯಾಯರೊಡನೆ ಸತ್ಯ ಹೇಳಿ, ಕ್ಷಮೆ ಕೇಳಿದರು. ಇದರಿಂದಲೇ ಗೋಪಾಲಕೃಷ್ಣ ಗೋಖಲೆ ಎಷ್ಟೊಂದು ಸತ್ಯವಂತರೆಂದು ತಿಳಿಯಬಹುದು.

ಗೋಖಲೆಯವರು 'ಮೆಟ್ರಿಕ್ಯುಲೇಶನ್' ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಆ ಮೇಲೆ ಕೊಲ್ಲಾಪುರದ ರಾಜಾರಾಮ ಕಾಲೇಜಿಗೆ ಸೇರಿದರು. ಕಾಲೇಜಿನಲ್ಲಿ ಕಲಿಯುವಾಗ ಅವರಿಗೆ ಓದುವುದೊಂದೇ ಯೋಚನೆಯಲ್ಲದೆ ಬೇರೆ ಯೋಚನೆಯಿಲ್ಲ. ಪುಸ್ತಕಗಳೇ ಅವರ ಗೆಳೆಯರು. ದೊಡ್ಡ ದೊಡ್ಡ ವಿದ್ವಾಂಸರು ಬರೆದ ಪುಸ್ತಕಗಳನ್ನು ಓದಿ ಆಗಲೇ ಅವರು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡರು; ವಿಚಾರಶಕ್ತಿಯನ್ನು ಬೆಳೆಸಿಕೊಂಡರು; ಗುಣ ನಡತೆ ತಿದ್ದಿಕೊಂಡರು.

ಗೋಪಾಲಕೃಷ್ಣರ ಕಾಲೇಜು ವಿದ್ಯಾಭ್ಯಾಸ ಮುಗಿಯಿತು. ಬಿ. ಎ. ಪರೀಕ್ಷೆಯಲ್ಲಿ ಉತ್ತಮ ತರಗತಿಯಲ್ಲಿ ಉತ್ತೀರ್ಣರಾದರು. ಆಗಲೇ ಅವರಿಗೆ ಹೊಟ್ಟೆಬಟ್ಟೆಗಳ ಚಿಂತೆ ತಲೆದೋರಿತು. ಮುಂದೆ ಮುಂಬಾಯಿಯ ನ್ಯೂ ಇಂಗ್ಲಿಷ್ ಹೈಸ್ಕೂಲಿನಲ್ಲಿ ಉಪಾಧ್ಯಾಯ ವೃತ್ತಿ ಕೈಕೊಂಡರು. ನ್ಯಾಯಶಾಸ್ತ್ರ ಕಲಿಯಬೇಕೆಂದು ಅವರಿಗೆ ತುಂಬಾ ಆಸೆ. ಆದರೆ ಜೀವನಕ್ಕಾಗಿ ದುಡಿಯದೆ ನಿರ್ವಾಹವಿಲ್ಲ. ಉಪಾಧ್ಯಾಯ ವೃತ್ತಿಯಲ್ಲಿದ್ದಾಗಲೇ ಅವರು ನ್ಯಾಯಶಾಸ್ತ್ರದ ಎಂದರೆ ಕಾನೂನಿನ ಅಭ್ಯಾಸಮಾಡತೊಡಗಿದರು. ಹಗಲಿರುಳು ಕಷ್ಟಪಟ್ಟು ಕಲಿತು ವಕೀಲಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

ಬಾಲ್ಯದಿಂದಲೂ ಗೋಪಾಲಕೃಷ್ಣರ ಮನಸ್ಸು ಜ್ಞಾನ ಸಂಪಾದನೆಯಲ್ಲಿಯೇ ಆಸಕ್ತವಾಗಿತ್ತೆಂದು ಹೇಳಿದೆಯಷ್ಟೆ. ವಕೀಲಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೇಲೂ ಅವರ ಜ್ಞಾನದ ಆಸೆ ಕಡಿಮೆಯಾಗಲಿಲ್ಲ. ಇತಿಹಾಸ ಸಾಹಿತ್ಯ ಅರ್ಥಶಾಸ್ತ್ರಗಳನ್ನು ವಿಶೇಷವಾಗಿ ಅಭ್ಯಾಸಮಾಡತೊಡಗಿದರು. ಗೋಖಲೆಯುವರು ಒಂದು ನಿಮಿಷ ಕೂಡ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ. ದಾರಿ ನಡೆಯುತ್ತಿದ್ದಾಗ ಕೂಡ ಅವರು ಪುಸ್ತಕ ಹಿಡಿದು ಓದುತ್ತ ಹೋಗುತ್ತಿದ್ದರಂತೆ.

ಆ ಕಾಲದಲ್ಲಿ ಬಾಲಗಂಗಾಧರ ತಿಲಕರೆಂದರೆ ಮಹಾರಾಷ್ಟ್ರದಲ್ಲಿ ಮಾತ್ರವಲ್ಲ, ಅಖಿಲ ಭಾರತದಲ್ಲಿಯೇ ಬಲುದೊಡ್ಡ ಮುಂದಾಳು. ಲೋಕಮಾನ್ಯರೆಂದು ಅವರ ಬಿರುದು. ದೇಶದ ಸ್ವಾತಂತ್ರ್ಯಕ್ಕಾಗಿ ಅವರು ಹೆಣಗಾಡುತ್ತಿದ್ದರು. ಅಂದಿನ ಇಂಗ್ಲಿಷ್ ಸರಕಾರ ಕೂಡ ಲೋಕಮಾನ್ಯರಿಗೆ ಹೆದರುತ್ತಿತ್ತು. ಅವರ ಶಕ್ತಿ ಅಂಥಾದ್ದು. ತಿಲಕರ ಬಾಯಿಯಿಂದ ಒಂದು ಮಾತು ಹೊರ ಬಿದ್ದರೆ ಸಾಕು, ಜನರು ಏನು ಮಾಡಲೂ ಸಿದ್ಧರೇ. ಬಾಲ ಗಂಗಾಧರ ತಿಲಕರು ದೊಡ್ಡ ಮುಂದಾಳುಗಳು ಮಾತ್ರವಲ್ಲ, ಮಹಾವಿದ್ವಾಂಸರೂ ಆಗಿದ್ದರು. ಗೋಖಲೆಯುವರಿಗೆ ತಿಲಕರ ಪರಿಚಯುವಾಯಿತು. ಪರಿಚಯು ಸ್ನೇಹವಾಗಿ ಪರಿಣಮಿಸಿತು. ಗೋಖಲೆ ತಿಲಕರೆಂದರೆ ಅಚ್ಚುಮೆಚ್ಚಿನ ಗೆಳೆಯರೆನ್ನಿಸಿದರು.

ಗೋಖಲೆಯುವರ ಮನಸೆಳೆದ ಇನ್ನೊಬ್ಬ ದೊಡ್ಡ ಮನುಷ್ಯರು ಆಗರ್ಕರ್ ಎಂಬವರು. ಇವರೂ ಮಹಾರಾಷ್ಟ್ರದವರೇ. ಆಗರ್ಕರರೂ ತಿಲಕರಂತೆಯೇ ಮಹಾ ವಿದ್ವಾಂಸರು, ಒಳ್ಳೆಯ ಗುಣವಂತರು, ತ್ಯಾಗಿಗಳು, ಉದಾರಿಗಳು. ಆಗರ್ಕರರ ಉತ್ತಮ ಗುಣಗಳು ಗೋಖಲೆಯುವರನ್ನು ಸೇರಿಕೊಂಡುವು. ದೀನ ದಲಿತರ

ಸೇವೆ—ಪರೋಪಕಾರ—ಇವನ್ನು ಗೋಖಲೆಯವರು ಆಗರ್ಕರ ರಿಂದಲೇ ಕಲಿತರು.

ಗೋಪಾಲಕೃಷ್ಣ ಗೋಖಲೆಯವರು ಬಲು ಹೆಚ್ಚಾಗಿ ಗೌರ ವಿಸುತ್ತಿದ್ದ ಇನ್ನೊಬ್ಬ ವ್ಯಕ್ತಿಯೆಂದರೆ ಮಹಾದೇವ ಗೋವಿಂದ ರಾನಡೆ. ಗೋಖಲೆಯವರು ರಾನಡೆಯವರನ್ನು ತನ್ನ ಗುರು ಗಳೆಂದೇ ಹೇಳುತ್ತಿದ್ದರು. ಇವರಿಬ್ಬರೂ ತಮ್ಮ ಜೀವನದಲ್ಲೆಲ್ಲಾ ಗೆಳೆಯರಾಗಿಯೇ ಉಳಿದರು.

ಗೋಪಾಲಕೃಷ್ಣ ಗೋಖಲೆ ವಕೀಲಿ ಪರೀಕ್ಷೆಯಲ್ಲಿ ಉತ್ತೀ ರ್ಣರಾದರೂ, ಆ ವೃತ್ತಿಯನ್ನು ಮಾತ್ರ ಕೈಕೊಳ್ಳಲಿಲ್ಲ. ಮುಂಬಾ ಯಿಯ ನ್ಯೂ ಇಂಗ್ಲಿಷ್ ಹೈಸ್ಕೂಲನ್ನು ಬಿಟ್ಟು ಪೂನಾದ ಫರ್ಗ್ಯು ಸನ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿದರು. ಕಾಲೇಜಿನ ಅಧ್ಯಾಪಕರೆಂದು ಅವರು ಬಹಳ ಹೆಚ್ಚು ವೇತನವನ್ನು ತೆಗೆದು ಕೊಳ್ಳುತ್ತಿರಲಿಲ್ಲ. ತಮ್ಮ ಸರಳ ಜೀವನಕ್ಕೆ ಬೇಕಾದಷ್ಟೇ ವೇತನ ಪಡೆಯುತ್ತಿದ್ದರು.

ಗೋಖಲೆಯವರು ಮೇಲ್ತರಗತಿಯ ಸಾಹಿತಿಗಳು. ಹಲವು ಉತ್ತಮ ಪುಸ್ತಕಗಳನ್ನು ಅವರು ಬರೆದಿರುವರು. ಫರ್ಗ್ಯುಸನ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗಲೇ 'ಸುಧಾರಕ' ಎಂಬ ಹೆಸರಿನ ಇಂಗ್ಲಿಷ್-ಮರಾಠಿ ವಾರಪತ್ರಿಕೆಯೊಂದನ್ನು ಪ್ರಕಟಿಸು ತ್ತಿದ್ದರು. ಅದೇ ಕಾಲಕ್ಕೆ ಇನ್ನೊಂದು ತ್ರೈಮಾಸಿಕ ಪತ್ರಿಕೆಯೂ ಅವರ ಸಂಪಾದಕತ್ವದಲ್ಲಿ ಹೊರಡುತ್ತಿತ್ತು. ಗೋಖಲೆಯವರು ತಮ್ಮ ಈ ಎರಡು ಪತ್ರಿಕೆಗಳಲ್ಲಿಯೂ, ದೇಶದ ಆಡಳಿತಕ್ಕೆ ಸಂಬಂಧಿಸಿದ—ಜನರ ಕಷ್ಟಸುಖಗಳ ಕುರಿತಾದ ವಿಷಯಗಳನ್ನು ಚರ್ಚಿಸಿ, ಬರೆದು ಪ್ರಕಟಿಸುತ್ತಿದ್ದರು.

ಅದೇ ಕಾಲಕ್ಕೆ ಪೂನದಲ್ಲಿ ಒಂದು ರಾಜಕೀಯ ಸಂಸ್ಥೆ

ಇತ್ತು. ರಾಜಕೀಯ ವಿಷಯದಲ್ಲಿ ಸಾರ್ವಜನಿಕ ಕೆಲಸಗಾರರನ್ನು ಸಿದ್ಧಪಡಿಸುವುದೇ ಈ ಸಂಸ್ಥೆಯ ಕೆಲಸ. ಗೋಪಾಲಕೃಷ್ಣ ಗೋಖಲೆಯವರು ಆ ಸಂಸ್ಥೆಯ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು. ಹೀಗೆ ಅವರು ರಾಜಕೀಯ ಕಾರ್ಯಗಳಲ್ಲಿ ಭಾಗ ವಹಿಸಲು ಪ್ರಾರಂಭಿಸಿದರು. ಗೋಖಲೆಯವರು ರಾಜಕೀಯ ರಂಗಕ್ಕೆ ಇಳಿಯಲು ಇದೇ ಪ್ರಾರಂಭ.

ಗೋಖಲೆಯವರಿಗೆ ಬಡವರೆಂದರೆ ತುಂಬಾ ಪ್ರೀತಿ; ದಯೆ. ಹಿಂದುಸ್ತಾನದ ಕೋಟಿಗಟ್ಟಲೆ ದೀನದಲಿತರ ಸೇವೆಯೇ ಅವರ ಜೀವನದ ಗುರಿ; ಅದರಿಂದಲೇ ಅವರಿಗೆ ಸುಖ, ಸಂತೋಷ. ಸರಕಾರದ ಮುಂದೆಯೂ, ಸಾರ್ವಜನಿಕ ಸಭೆಗಳಲ್ಲಿಯೂ ಗೋಖಲೆಯವರು ದೀನದಲಿತರ ಪರವಾಗಿಯೇ ವಾದಿಸುತ್ತಿದ್ದರು. ಆ ಕಾಲದಲ್ಲಿ ಹಿಂದೀಯರಿಗೆ ದೊಡ್ಡ ದೊಡ್ಡ ಸರಕಾರಿ ಅಧಿಕಾರಗಳು ದೊರಕುತ್ತಿರಲಿಲ್ಲ. ಅಂತಹ ಅಧಿಕಾರಗಳಿಗೆಲ್ಲಾ ಬಿಳಿಯ ಜನರೇ ನೇಮಿಸಲ್ಪಡುತ್ತಿದ್ದರು. ಗೋಖಲೆಯವರ ಪ್ರಯತ್ನದ ಫಲವಾಗಿ ಕ್ರಮೇಣ ಈ ಅನ್ಯಾಯ ಕಡಿಮೆಯಾಗುತ್ತ ಬರತೊಡಗಿತು. ಹಿಂದೀಯರಿಗೂ ದೊಡ್ಡದೊಡ್ಡ ಅಧಿಕಾರಗಳು ದೊರಕತೊಡಗಿದುವು.

ಗೋಪಾಲಕೃಷ್ಣ ಗೋಖಲೆಯವರು ಕೈಕೊಂಡ ಇನ್ನೊಂದು ಮಹತ್ವದ ಕಾರ್ಯವೆಂದರೆ ಹಿಂದೂ ಮುಸ್ಲಿಮರೊಳಗೆ ಒಗ್ಗಟ್ಟು. ಇಂಗ್ಲಿಷರು ನಮ್ಮ ದೇಶವನ್ನು ವಶಪಡಿಸಿಕೊಳ್ಳುವ ಮೊದಲು ಇಲ್ಲಿ ಹಿಂದೂ ಮುಸ್ಲಿಮ್ ಮೊದಲಾದ ಎಲ್ಲಾ ಧರ್ಮದವರೂ ಅಣ್ಣತಮ್ಮಂದಿರಂತೆ ಪ್ರೀತಿಯಿಂದ—ಒಗ್ಗಟ್ಟಿನಿಂದ—ನೆಲಸಿದ್ದರು. ಬ್ರಿಟಿಷರ ಕುಹಕತಂತ್ರದ ಫಲವಾಗಿ ಹಿಂದೂ ಮುಸ್ಲಿಮರೊಳಗೆ ಒಗ್ಗಟ್ಟು ಮುರಿಯಿತು; ಈ ಎರಡು ಮತದವರು ಪರಸ್ಪರ

ದ್ವೇಶಿಸತೊಡಗಿದರು. ಈ ಹಗೆತನದ ಕಿಚ್ಚಿಗೆ ಇಂಗ್ಲಿಷರು ಗಾಳಿ ಹಾಕಿದರು. ಅಲ್ಲಲ್ಲಿ ಹೊಡೆದಾಟ ಬಡಿದಾಟಗಳೂ ಆಗ ತೊಡಗಿದುವು. ಹಿಂದೂ ಮುಸ್ಲಿಮರ ದ್ವೇಷ ಭಯಂಕರ ರೂಪಕ್ಕೇರಿತು. ಆ ವೇಳೆಗೆ ಗೋಖಲೆಯವರು "ಹಿಂದೂ ಮುಸ್ಲಿಮರು ಒಬ್ಬರನೊಬ್ಬರು ದ್ವೇಶಿಸಬಾರದು; ಒಬ್ಬರಿಗೊಬ್ಬರು ಕಾದಾಡಬಾರದು. ಎಲ್ಲರೂ ಒಬ್ಬಳೇ ಭಾರತಮಾತೆಯ ಮಕ್ಕಳು; ಅಣ್ಣತಮ್ಮಂದಿರು. ಪರಸ್ಪರ ಪ್ರೀತಿ ವಿಶ್ವಾಸಗಳಿಂದ ನಡೆದುಕೊಳ್ಳಬೇಕು" ಎಂದು ಬೋಧಿಸತೊಡಗಿದರು.

ಹಿಂದುಸ್ತಾನದ ರಾಜಕೀಯ ಕ್ಷೇತ್ರಕ್ಕಿಳಿದು ಕೆಲಸಮಾಡತೊಡಗಿದ ಗೋಖಲೆಯವರು ಬಹುಬೇಗನೆ ಗಣನೀಯ ಸ್ಥಾನಗಳಿಸಿದರು; ಸುಪ್ರಸಿದ್ಧ ಸೇವಕರಲ್ಲಿ ಒಬ್ಬರಾದರು. ರಾಷ್ಟ್ರಸಭೆಯ ಅಧಿವೇಶನ ಪೂನದಲ್ಲಿ ಜರಗಿದಾಗ ಗೋಖಲೆಯವರೇ ಸ್ವಾಗತ ಸಮಿತಿಯ ಕಾರ್ಯದರ್ಶಿಗಳಾದರು. ಕಾರ್ಯದರ್ಶಿಗಳಾಗಿ ಅವರು ಮಾಡಿದ ಕೆಲಸ ತುಂಬಾ ಮಹತ್ವದ್ದು. ಗೋಖಲೆಯವರು ಅಷ್ಟೊಂದು ನಿಃಸ್ವಾರ್ಥಬುದ್ಧಿಯ ಜನಸೇವಕರಾದರೂ ಅವರಿಗೂ ವಿರೋಧಿಗಳು ಇಲ್ಲದೆ ಇರಲಿಲ್ಲ. ಅವರ ಸೇವಾಕಾರ್ಯಗಳಿಗೆ ಆಗಾಗ ಎಡರುತೊಡರುಗಳನ್ನು ತಂದೊಡ್ಡುವವರೂ ಹಲವರಿದ್ದರು. ಆದರೆ ಗೋಖಲೆಯವರು ವಿರೋಧಿಗಳನ್ನು ಕೂಡ ದ್ವೇಷಿಸುತ್ತಿರಲಿಲ್ಲ; ಬದಲಾಗಿ ಪ್ರೀತಿಯಿಂದಲೇ ಕಾಣುತ್ತಿದ್ದರು.

ಗೋಖಲೆಯವರು 1896ನೆಯ ಇಸವಿಯಲ್ಲಿ ಇಂಗ್ಲೆಂಡಿಗೆ ಹೋದರು. ಬ್ರಿಟಿಷ್ ಸರಕಾರ ಹಿಂದುಸ್ತಾನದ ಜನರ ಹಣಕಾಸಿನ ಸ್ಥಿತಿಯನ್ನು ಪರಿಶೀಲಿಸಿ ತನಗೆ ತಿಳಿಸುವುದಕ್ಕಾಗಿ ಒಂದು ಸಮಿತಿಯನ್ನು ನಿಯಮಿಸಿತ್ತು. ಆ ಸಮಿತಿಯ ಮುಂದೆ ಗೋಖಲೆ

ಯವರು ಹಿಂದುಸ್ಥಾನದ ಜನರ ಸಂಕಷ್ಟದ ಸ್ಥಿತಿಯನ್ನು ನಿವೇದಿಸಿದರು. ಇಲ್ಲಿಯ ಜನರು ಕೊಡುವ ಕಂದಾಯತೆರಿಗೆ ಅವರ ಅಭಿವೃದ್ಧಿಗಾಗಿ—ಪ್ರಯೋಜನಕ್ಕಾಗಿ— ಉಪಯೋಗವಾಗುತ್ತಿಲ್ಲ. ಹಿಂದುಸ್ಥಾನದ ಜನರ ಬಡತನವನ್ನು ಹೋಗಲಾಡಿಸುವುದಕ್ಕಾಗಿ, ಅಜ್ಞಾನ ನಿವಾರಣೆಗಾಗಿ ಬ್ರಿಟಿಷ್ ಸರಕಾರ ಯಾವ ಕೆಲಸವನ್ನೂ ಮಾಡಿಲ್ಲ—ಎಂದು ಮುಂತಾಗಿ ಗೋಖಲೆಯವರು ಸತ್ಯಸಂಗತಿ ಹೊರಗೆಡಹಿದರು. ಅವರ ಪ್ರಯತ್ನದಿಂದ ಅಲ್ಪಸ್ವಲ್ಪ ಪ್ರಯೋಜನವೂ ಆಯಿತು.

ಗೋಖಲೆಯವರು ಇಂಗ್ಲೆಂಡಿನಲ್ಲಿದ್ದಾಗಲೇ ಮುಂಬಾಯಿಯಲ್ಲಿ ಪ್ಲೇಗ್ ರೋಗ ತಲೆದೋರಿತು. ಆ ಸುದ್ದಿ ಕೇಳಿದ ಗೋಖಲೆಯವರಿಗೆ ತುಂಬಾ ವ್ಯಸನವಾಯಿತು. ತಮ್ಮ ಜನರು ಕಷ್ಟದಲ್ಲಿರುವಾಗ ಅವರಿಗೆ ಸಹಾಯ ಮಾಡಲು ಸಾಧ್ಯವಾಗಲಿಲ್ಲವಲ್ಲಾ ಎಂಬುದೇ ಅವರ ಬೇಸರ. ಸರಕಾರ ಪ್ಲೇಗ್ ರೋಗವನ್ನು ತಡೆಗಟ್ಟಲು ಹೆಚ್ಚಿನ ಯಾವ ಪ್ರಯತ್ನವನ್ನೂ ಕೈಕೊಳ್ಳಲಿಲ್ಲ. ಆ ವರ್ತಮಾನ ಗೋಖಲೆಯವರಿಗೆ ತಿಳಿಯಿತು. ಕೂಡಲೇ ಅವರು ಇಂಗ್ಲೆಂಡಿನಲ್ಲಿ ಸಭೆಗಳನ್ನು ಜರಗಿಸಿ, ಅಲ್ಲಿನ ಜನರಿಗೆ ಹಿಂದೀಯರ ಮೇಲೆ ಸಹಾನುಭೂತಿ ತಲೆದೋರುವಂತೆ ಮಾಡಿದರು. ತಮ್ಮ ಭಾಷಣಗಳಲ್ಲಿ ಹಿಂದುಸ್ಥಾನ ಸರಕಾರದ ಇಂಗ್ಲಿಷ್ ಅಧಿಕಾರಿಗಳ ವರ್ತನೆಯನ್ನು ಬಯಲಿಗೆಳೆದರು; ಹಿಂದುಸ್ಥಾನ ಸರಕಾರದ ಕುರಿತಾದ ಸತ್ಯಸಂಗತಿಗಳನ್ನು ಬ್ರಿಟಿಷ್ ಜನರ ಮುಂದಿರಿಸಿದರು.

ಗೋಪಾಲಕೃಷ್ಣ ಗೋಖಲೆ ಇಂಗ್ಲೆಂಡಿನಿಂದ ಹಿಂದಿರುಗಿದ ಮೇಲೆ ಮುಂಬಾಯಿಯ ಶಾಸನ ಸಭೆಯ ಸದಸ್ಯರಾಗಿ ಆರಿಸಲ್ಪಟ್ಟರು. ಶಾಸನ ಸಭೆಯ ಸದಸ್ಯರಾಗಿ ಅವರು ಬಡವರ ಏಳಿಗೆಗಾಗಿ ತುಂಬಾ ಕೆಲಸ ಮಾಡಿದರು. ಮಾದಕ ವಸ್ತುಗಳನ್ನು

ನಿಷೇಧಿಸಬೇಕೆಂದು ಚಳವಳಿ ನಡೆಸಿದರು. ಮಾದಕ ವಸ್ತುಗಳ ಮಾರಾಟ ಯಾವ ರೀತಿಯಲ್ಲಿ ಬಡವರ ನಾಶಕ್ಕೆ ಕಾರಣವಾಗಿದೆ ಯೆಂಬುದನ್ನು ಸರಕಾರಕ್ಕೆ ತೋರಿಸಿಕೊಟ್ಟರು.

ಆ ಮೇಲೆ ಗೋಖಲೆಯವರು ಡಿಲ್ಲಿಯ ಕೇಂದ್ರ ಶಾಸನ ಸಭೆಯ ಸದಸ್ಯರಾದರು. ಆಗಲೇ ಸಾರ್ವಜನಿಕ ಕೆಲಸ ಹೆಚ್ಚು ತ್ತಾ ಬಂದುದರಿಂದ ಅವರು ತಮ್ಮ ಅಧ್ಯಾಪಕ ವೃತ್ತಿಯನ್ನು ಬಿಟ್ಟುಬಿಡಬೇಕಾಯಿತು.

ಕೇಂದ್ರ ಶಾಸನ ಸಭೆಯ ಸದಸ್ಯರಾಗಿ ಗೋಖಲೆಯವರು ಮಾಡಿದ ಕೆಲಸಗಳಿಂದ ಅವರ ಕೀರ್ತಿ ಮತ್ತಷ್ಟು ಹೆಚ್ಚಿತು; ಗೌರವ ಬೆಳೆಯಿತು. ಹಿಂದೀಯರ ಹಿತದ ಕುರಿತು ಗೋಖಲೆ ಯವರಂತೆ ಮಾತನಾಡಿದವರು ಬೇರೊಬ್ಬರಿಲ್ಲ ಎನ್ನುವಂತಾ ಯಿತು. ತಮ್ಮ ಮಾತಿನ ಮೂಲಕ ಜನರನ್ನು ಒಲಿಸಿಕೊಳ್ಳುವ ವಿಶೇಷ ಶಕ್ತಿ ಅವರಿಗಿತ್ತು.

ಕೇಂದ್ರ ಶಾಸನ ಸಭೆಯ ಸದಸ್ಯರಾಗಿ ಗೋಪಾಲಕೃಷ್ಣ ಗೋಖಲೆಯವರು ಜನರ ಸಂಕಷ್ಟ ನಿವಾರಣೆಗಾಗಿ ತುಂಬಾ ಹೆಣಗಾಡಿದರು. ಹಿಂದುಸ್ಥಾನದಲ್ಲಿದ್ದ ಬ್ರಿಟಿಷ್ ಸರಕಾರ ಸೈನ್ಯ ಕ್ಕಾಗಿ ಅಪಾರ ಧನ ವ್ಯಯಮಾಡುವುದನ್ನು ಕಂಡು ಅವರ ಹೃದಯ ನೊಂದಿತ್ತು. ಜನರಿಂದ ಕಂದಾಯ ತೆರಿಗೆಗಳ ರೂಪ ದಲ್ಲಿ ಪಡೆದ ಹಣವನ್ನು ಈ ರೀತಿ ವ್ಯರ್ಥವಾಗಿ ಸೈನ್ಯಕ್ಕೆ ವೆಚ್ಚ ಮಾಡುವುದು ಸರಿಯಲ್ಲವೆಂದೂ, ಜನರ ಹಣವನ್ನು ಜನರ ಪ್ರಯೋಜನಕ್ಕಾಗಿಯೇ ವೆಚ್ಚಮಾಡಬೇಕೆಂದೂ ಅವರು ಕೇಂದ್ರ ಶಾಸನ ಸಭೆಯಲ್ಲಿ ವಾದಿಸಿದರು. ಸರಕಾರ ಉಪ್ಪಿನ ತೆರಿಗೆಯ ಮೂಲಕ ಬಡವರಿಂದ ಅಪಾರವಾದ ಹಣ ಸುಲಿಯುತ್ತಿತ್ತು. ಇದು ಅನ್ಯಾಯವಾಗಿದೆಯೆಂದೂ, ಉಪ್ಪಿನ ತೆರಿಗೆಯನ್ನು ತೆಗೆದು

ಹಾಕಬೇಕೆಂದೂ ಗೋಖಲೆಯವರು ಚಳವಳಿ ನಡೆಯಿಸಿದರು. ವಿದ್ಯಾಭ್ಯಾಸ ಪದ್ಧತಿಯಲ್ಲಿ ಸುಧಾರಣೆಯಾಗಬೇಕು; ಉದ್ಯೋಗ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕು; ಕೃಷಿವ್ಯವಸಾಯದಲ್ಲಿ ಸುಧಾರಣೆ ಕೈಕೊಳ್ಳಬೇಕು ಎಂದು ಮುಂತಾದ ವಿಷಯಗಳಲ್ಲಿ ಗೋಖಲೆಯವರು ಸರಕಾರವನ್ನು ಒತ್ತಾಯಿಸಿದರು.

ಶಾಸನ ಸಭೆಯಲ್ಲಿ ಮಾತ್ರವಲ್ಲ, ಸಾರ್ವಜನಿಕ ಕ್ಷೇತ್ರದಲ್ಲಿಯೂ ಗೋಖಲೆಯವರು ದೇಶದ ಜನರ ಒಳ್ಳೆಯದಕ್ಕಾಗಿ ತುಂಬಾ ಹೆಣಗಾಡಿದರು. ತಮ್ಮ ಪ್ರತಿಯೊಂದು ಭಾಷಣದಲ್ಲಿಯೂ "ಬಡವರ ಅಭಿವೃದ್ಧಿಗಾಗಿ ಪ್ರತಿಯೊಬ್ಬನೂ ತನ್ನಿಂದಾದ ಕೆಲಸಮಾಡಬೇಕೆಂ"ದು ಬಿನ್ನವಿಸಿಕೊಂಡರು. ಯಾವ ದೇಶದ ಜನರು ತಮ್ಮಲ್ಲೇ ಕೆಲವರನ್ನು ಅಸ್ಪೃಶ್ಯರೆಂದು ಪ್ರಾಣಿಗಳಿಗಿಂತಲೂ ಕಡೆಯಾಗಿ ತಿಳಿಯುತ್ತಿರುವರೋ, ಅವರು ಸ್ವಾತಂತ್ರ್ಯ ಪಡೆಯುಲಿಕ್ಕೆ ಯಾವ ರೀತಿಯಿಂದಲೂ ಅರ್ಹರಲ್ಲ ಎಂದು ಗೋಖಲೆಯವರು ಹೇಳುತ್ತಿದ್ದರು. ಹರಿಜನರ ವಿಷಯದಲ್ಲಿ ಅವರಿಗೆ ತುಂಬಾ ಸಹಾನುಭೂತಿ ಇತ್ತು. ಹರಿಜನರ ದುರವಸ್ಥೆಯನ್ನು ಹೋಗಲಾಡಿಸುವ ಸಲುವಾಗಿಯೂ ಅವರು ತುಂಬಾ ದುಡಿದರು.

ಗೋಪಾಲಕೃಷ್ಣ ಗೋಖಲೆಯವರು ಮಾಡಿದ ಇನ್ನೊಂದು ಮಹತ್ಕಾರ್ಯವೆಂದರೆ 'ಭಾರತ ಸೇವಕ ಸಮಾಜ' (ಸರ್ವೆಂಟ್ಸ್ ಆಫ್ ಇಂಡಿಯಾ ಸೊಸ್ಯಾಟಿ) ವೆಂಬ ಮಹಾ ಸಂಸ್ಥೆಯ ಸ್ಥಾಪನೆ. ಇಂತಹ ಮಹಾ ಸಂಸ್ಥೆ ನಮ್ಮ ದೇಶದಲ್ಲಿ ಇನ್ನೊಂದಿಲ್ಲ. ನಿಸ್ವಾರ್ಥಿಗಳಾದ ಜನಸೇವಕರನ್ನು ಸಿದ್ಧಪಡಿಸುವುದೂ, ದೀನ ದಲಿತರ ಮತ್ತು ಸಂಕಷ್ಟಕ್ಕೀಡಾದವರ ಸೇವೆ ಮಾಡುವುದೂ ಈ ಸಂಸ್ಥೆಯ ಕಾರ್ಯವಾಗಿದೆ. 'ಭಾರತ ಸೇವಕ ಸಮಾಜ' ಕಳೆದ ನಲ್ವತ್ತೈದು ವರ್ಷಗಳಿಂದಲೂ ಅಪಾರ ಸೇವೆ ಸಲ್ಲಿಸಿದೆ; ಇನ್ನೂ ಸಲ್ಲಿಸುತ್ತಲೇ ಇದೆ.

1906ನೆಯ ಇಸವಿಯಲ್ಲಿ ಗೋಖಲೆಯವರು ಇನ್ನೊಮ್ಮೆ ಇಂಗ್ಲೆಂಡಿಗೆ ಹೋದರು. ಈ ಸರ್ತಿಯೂ ಅವರು ಇಂಗ್ಲೆಂಡಿನಲ್ಲಿ ಅನೇಕ ಸಾರ್ವಜನಿಕ ಸಭೆಗಳಲ್ಲಿ ಭಾಷಣಮಾಡಿ ಬಿಳಿಜನರಿಗೆ ನಮ್ಮ ದೇಶದ ಕಷ್ಟಸಂಕಷ್ಟಗಳ ಅರಿವಾಗಿಸಿದರು. ಎಡೆಬಿಡದೆ ಕೆಲಸಮಾಡಿದುರ ಪರಿಣಾಮವಾಗಿ ಗೋಖಲೆಯವರ ಆರೋಗ್ಯ ದಿನದಿಂದ ದಿನಕ್ಕೆ ಕೆಡತೊಡಗಿತು. ಗಂಟಲಿನಲ್ಲಿ ಒಂದು ಬಗೆಯ ಬೇನೆ ಕಾಣಿಸಿಕೊಂಡಿತು. ಅದಕ್ಕಾಗಿ ಶಸ್ತ್ರಕ್ರಿಯೆ ಮಾಡಬೇಕಾಯಿತು. ಶಸ್ತ್ರ ಕ್ರಿಯೆಯಿಂದ ಆ ಬೇನೆ ವಾಸಿಯಾಯಿತು.

ಗೋಖಲೆಯವರು ಇಂಗ್ಲೆಂಡಿನಿಂದ ಹಿಂದಿರುಗಿ ಬಂದೊಡನೆಯೇ ಅದೇ ವರ್ಷ ಕಾಶಿಯಲ್ಲಿ ಜರಗಿದ ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಆಗಿನ ವೈಸರಾಯರು ದೇಶವನ್ನಾಳುವ ರೀತಿನೀತಿಗಳನ್ನು ತುಂಬಾ ಟೀಕಿಸಿದರು. ಆ ಕಾಲದಲ್ಲಿ ಬಿಳಿ ಅಧಿಕಾರಿಗಳ ವಿಷಯದಲ್ಲಿ ದೇಶದಲ್ಲಿ ದ್ವೇಷ ತುಂಬಿ ತುಳುಕುತಿತ್ತು. ಹಿಂದೀ ಯುವಕರು ಹಿಂಸಾವೃತ್ತಿಗೆ ತೊಡಗಿದ್ದರು. ಅದೇ ವೇಳೆಗೆ ಸರಕಾರೀ ಅಧಿಕಾರದಲ್ಲಿರುವ ಬಿಳಿಜನರನ್ನು ಕೊಲ್ಲುವುದೇ ಮೊದಲಾದ ಹಿಂದೀ ಯುವಕರ ಕೃತ್ಯಗಳನ್ನೂ ತಪ್ಪೆಂದು ಸಾರಿ ಹೇಳಿದರು.

ಹಿಂಸೆಯ ಮೂಲಕ ಸ್ವರಾಜ್ಯ ಪಡೆಯಬಹುದೆಂಬ ವಿಚಾರದಲ್ಲಿ ಗೋಖಲೆಯವರಿಗೆ ನಂಬಿಗೆಯಿರಲಿಲ್ಲ. ಅದಷ್ಟು ಮಟ್ಟಿಗೆ ಬ್ರಿಟಿಷ್ ಸರಕಾರವನ್ನು ಒತ್ತಾಯಿಸಿ ಹೆಚ್ಚು ಹೆಚ್ಚಾಗಿ ಅಧಿಕಾರ ಪಡೆಯುತ್ತಾ ಬಂದು ಕಡೆಗೆ ಸಂಪೂರ್ಣ ಸ್ವರಾಜ್ಯ ಗಳಿಸಬೇಕೆಂಬುದೇ ಅವರ ತತ್ವವಾಗಿತ್ತು.

ಗೋಖಲೆಯವರು ಹಿಂದೀಯರ ಹಕ್ಕು ಬಾಧ್ಯತೆಗಳಿಗಾಗಿ

ಹಿಂದುಸ್ತಾನದಲ್ಲಿ ಮಾತ್ರವಲ್ಲದೆ ದಕ್ಷಿಣ ಆಫ್ರಿಕದಲ್ಲಿಯೂ ಹೋರಾಡಿದರು. ದಕ್ಷಿಣ ಆಫ್ರಿಕದಲ್ಲಿ ಸಾವಿರಾರು ಮಂದಿ ಹಿಂದೀಯರು ಹೋಗಿ ನೆಲಸಿರುವರು. ಅಲ್ಲಿಯೂ ಆಳುತ್ತಿರುವ ಬಿಳಿ ಜನರ ಸರಕಾರ ಆ ಹಿಂದೀಯರಿಗೆ ತರತರದ ಕಷ್ಟಕೊಡುತಿತ್ತು. ಗಾಂಧೀಜಿ ಅಲ್ಲಿನ ಹಿಂದೀಯರ ಪರವಾಗಿ ಸರಕಾರದೊಡನೆ ಹೋರಾಟ ನಡೆಯಿಸಿದ್ದರು. ಗೋಖಲೆಯವರು ದಕ್ಷಿಣ ಆಫ್ರಿಕಕ್ಕೆ ಹೋಗಿ ಆ ಹೋರಾಟವಲ್ಲಿ ಗಾಂಧೀಜಿಗೆ ನೆರವಾದರು. ಬಿಳಿ ಜನರ ದಬ್ಬಾಳಿಕೆಗೊಳಗಾದ ಬಡ ಹಿಂದೀಯರಿಗೆ ನೆರವು ನೀಡಿದರು.

ಎಡೆಬಿಡದೆ ಕೆಲಸಮಾಡಿದುದರ ಪರಿಣಾಮವಾಗಿ ಗೋಖಲೆಯವರ ಆರೋಗ್ಯ ಕೆಟ್ಟಿತು. ನಿದ್ರೆ ಬಾರದ ರೋಗವೊಂದು ಅವರನ್ನು ಬಾಧಿಸತೊಡಗಿತು. ಇದೇ ವೇಳೆಗೆ ಬ್ರಿಟಿಷ್ ಸರಕಾರ ಹಿಂದೀಯರಲ್ಲದವರನ್ನು ಉಚ್ಚ ಸರಕಾರಿ ಅಧಿಕಾರಿಗಳಾಗಿ ನೇಮಿಸುವ ಕುರಿತು ವಿಚಾರ ನಡೆಯಿಸಲು ಒಂದು ಸಮಿತಿಯನ್ನು ರಚಿಸಿತು. ಗೋಖಲೆಯವರು ಆರೋಗ್ಯ ನೆಟ್ಟಗಿಲ್ಲದಿದ್ದರೂ ಆ ಸಮಿತಿಯಲ್ಲಿ ಕೆಲಸ ಮಾಡಲು ಒಪ್ಪಿಕೊಂಡರು. ಅಲ್ಲಿಯೂ ಹಿಂದೀಯರ ಒಳ್ಳೆಯದಕ್ಕಾಗಿ ತುಂಬಾ ಕೆಲಸ ಮಾಡಿದರು. ಇದರಿಂದ ಅವರ ದೇಹಸ್ಥಿತಿ ಇನ್ನಷ್ಟು ಹಾಳಾಯಿತು. ನಿದ್ರೆ ಏನೇನೂ ಬಾರದಾಯಿತು. ಅವರನ್ನು ಪರೀಕ್ಷಿಸಿದ ಡಾಕ್ಟರರು ಅವರಿಗೆ ಇಂಗ್ಲೆಂಡಿನ ಹವೆ ಹಿಡಿಯದೆಂದೂ ಆದುದರಿಂದ ಕೂಡಲೇ ಹಿಂದುಸ್ತಾನಕ್ಕೆ ಹಿಂದಿರುಗಬೇಕೆಂದೂ ಸೂಚನೆ ಕೊಟ್ಟರು. ಹಾಗೆಯೇ ಗೋಖಲೆಯವರು ಹಿಂದುಸ್ತಾನಕ್ಕೆ ಹಿಂದಿರುಗಿದರು. ಹಿಂದುಸ್ತಾನಕ್ಕೆ ಬಂದ ಮೇಲೆ ತುಸುಮಟ್ಟಿಗೆ ಅವರ ಆರೋಗ್ಯದಲ್ಲಿ ಸುಧಾರಣೆಯಾಯಿತು

ಇದೇ ಕಾಲಕ್ಕೆ ಗಾಂಧೀಜಿ ದಕ್ಷಿಣ ಆಫ್ರಿಕದಿಂದ ಹಿಂದು ಸ್ಥಾನಕ್ಕೆ ಹಿಂದಿರುಗಿದ್ದರು. ಅಷ್ಟರಲ್ಲಿಯೇ ಗಾಂಧೀಜಿಯ ಹೆಸರು ದೇಶದ ನಾಲ್ಕು ಮೂಲೆಗಳಲ್ಲಿಯೂ ಹರಡಿ ಹೋಗಿತ್ತು. "ಭಾರತ ಸೇವಕ ಸಮಾಜ"ದವರು ಗಾಂಧೀಜಿಯನ್ನು ಗೌರವಿಸುವುದಕ್ಕಾಗಿ ದೊಡ್ಡದೊಂದು ಸತ್ಕಾರಕೂಟವನ್ನು ಏರ್ಪಡಿಸಿದರು. ಗೋಖಲೆ ಯವರಿಗೆ ಗಾಂಧೀಜಿಯ ಮೇಲೆ ತುಂಬಾ ಅಭಿಮಾನ, ಗಾಂಧೀ ಜಿಗೂ ಹಾಗೆಯೇ ಗೋಖಲೆಯೆಂದರಾಯಿತು. ಗಾಂಧೀಜಿ ಗೋಖಲೆಯವರನ್ನು ತುಂಬಾ ಗೌರವದಿಂದ ಕಾಣುತ್ತಿದ್ದರಲ್ಲದೆ ಅವರನ್ನು ತಮ್ಮ ರಾಜಕೀಯ ಗುರುವೆಂದೇ ಹೇಳುತ್ತಿದ್ದರು.

ಕೊನೆಗೆ ಗೋಖಲೆಯವರಿಗೆ ಎಡೆಬಿಡದೆ ಮಾನಸಿಕ ಕೆಲಸ ಮಾಡಿದ್ದರ ಪರಿಣಾಮವಾಗಿ ಸ್ಮೃತಿತಪ್ಪುವ ರೋಗವೊಂದು ತಲೆ ದೋರಿತು. ದೇಶದ ಮಹಾಮಹಾ ವೈದ್ಯರು ಬಂದು ಚಿಕಿತ್ಸೆ ಮಾಡಿದರು. ಹೆಚ್ಚಿನ ಪ್ರಯೋಜನವೇನೂ ಆಗಲಿಲ್ಲ. ರೋಗ ದಿನದಿಂದ ದಿನಕ್ಕೆ ಏರುತ್ತಾ ಹೋಗಿ ಕಡೆಗೆ 1915ನೆಯ ಇಸವಿ ಫೆಬ್ರುವರಿ ತಿಂಗಳು 19ನೆಯ ದಿನ ಹಿಂದುಸ್ಥಾನದ ಬಲುದೊಡ್ಡ ಜನಸೇವಕ ಗೋಪಾಲಕೃಷ್ಣ ಗೋಖಲೆ ಸ್ವರ್ಗಸ್ಥರಾದರು.

ಗೋಖಲೆಯವರ ಮರಣಕ್ಕಾಗಿ ದೇಶಕ್ಕೆ ದೇಶವೇ ಮರು ಗಿತು. ಬಡವರಂತೂ ತಾಯಿಯನ್ನು ಕಳಕೊಂಡ ತಬ್ಬಲಿಗಳಂತಾ ದರು. ದೇಶದ ಸ್ವಾತಂತ್ರ್ಯಕ್ಕಾಗಿ, ಬಡವರ ಸೇವೆಗಾಗಿ ಎಡೆ ಬಿಡದೆ ಕೆಲಸಮಾಡಿದ ಆ ದೇಶಸೇವಕನ ಹೆಸರು ಹಿಂದುಸ್ಥಾನದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲು ಯೋಗ್ಯವಾಗಿದೆ.

# ಮೋತೀಲಾಲ ನೆಹರು

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದವರಲ್ಲಿ ಮೋತೀಲಾಲ ನೆಹರುಗಳೂ ಒಬ್ಬರು. ಅವರು ತುಂಬಾ ಐಶ್ವರ್ಯವಂತರು; ಅರಮನೆಯಂತಹ ಮನೆ, ಮನೆತುಂಬ ಸೇವಕರು, ಸುಖದ ಜೀವನ ಅವರದು. ಆದರೆ ಅವರ ಮನಸ್ಸು ಮಾತ್ರ ವಿಶಾಲವಾದುದು. ಅವರಿಗೆ ಯಾವ ಕೊರತೆಯೂ ಇಲ್ಲದಿದ್ದರೂ, ಇನ್ನೊಬ್ಬರ ಕಷ್ಟಗಳನ್ನು ತಿಳಿದುಕೊಳ್ಳುವಷ್ಟು ದಯಾಬುದ್ಧಿ ಅವರಲ್ಲಿತ್ತು. ನಮ್ಮ ದೇಶದಲ್ಲಿ ಲಕ್ಷಾಂತರ ಜನರು ಹೊಟ್ಟೆತುಂಬ ಅನ್ನವಿಲ್ಲದೆ ಗತಿಯಿಲ್ಲದೆ ನರಳುತ್ತಿದ್ದರು. ಅದನ್ನು ನೋಡಿ ಅವರು ಮರುಗುತ್ತಿದ್ದರು. ಜನರ ಈ ರೀತಿಯ ಬಡತನಕ್ಕೆ ಕಾರಣವೇನೆಂದು ಅವರು ಆಲೋಚಿಸಿದರು. ಅದಕ್ಕೆ ಹೊರದೇಶದಿಂದ ಬಂದ ಇಂಗ್ಲಿಷರು ನೂರಾರು ವರ್ಷಗಳಿಂದ ನಮ್ಮ ಮೇಲೆ ಅಧಿಕಾರ ನಡೆಸುತ್ತಿರುವುದೇ ಕಾರಣ ಎಂದು ತಿಳಿದುಕೊಂಡರು. ನಮ್ಮ ಜನರು ಸುಖವಾಗಿ ಇರಬೇಕಾದರೆ ಇಂಗ್ಲಿಷರನ್ನು ಈ ದೇಶದಿಂದ ಓಡಿಸಬೇಕು; ನಮ್ಮನ್ನು ನಾವೇ ಆಳಬೇಕು ಎಂದು ಅವರು ಭಾವಿಸಿದರು. ಅದಕ್ಕಾಗಿ ಅವರು ಸ್ವಾತಂತ್ರ್ಯ ಚಳವಳಿಯಲ್ಲಿ ಸೇರಿದರು; ಭಾರತದ ಜನರಿಗೆ ಮಾರ್ಗದರ್ಶಕರಾದರು; ಎಲ್ಲರ ಪ್ರೀತಿಗೆ ಪಾತ್ರರಾದರು.

ಮೋತೀಲಾಲರ ಪೂರ್ವಜರು ಕಾಶ್ಮೀರದವರು. ರಾಜ ಕೌಲ್ ಎಂಬವರು ಸುಮಾರು ಹದಿನೆಂಟನೆಯ ಶತಮಾನದ ಪ್ರಾರಂಭದಲ್ಲಿ ದಿಲ್ಲಿಯಲ್ಲಿ ಬಂದು ನೆಲಸಿದರು. ನೆಹರುಗಳ ಹಿರಿಯರು ಮೊದಲು ಮೊಗಲ ಅರಸರ ಕೈಕೆಳಗೂ ಆ ಮೇಲೆ ಈಸ್ಟ್

ಇಂಡಿಯಾ ಕಂಪೆನಿ ಸರಕಾರದ ಕೈಕೆಳಗೂ ಹುದ್ದೆಯಲ್ಲಿದ್ದರು. ಸಾವಿರದ ಎಂಟುನೂರ ಐವತ್ತೇಳರಲ್ಲಿ, ಸಿಪಾಯಿ ದಂಗೆ ಎಂದು ಕರೆಯಲ್ಪಡುವ ನಮ್ಮ ಮೊದಲನೆಯ ಸ್ವಾತಂತ್ರ್ಯ ಯುದ್ಧ ನಡೆಯಿ ತಷ್ಟೆ? ಈ ಯುದ್ಧದ ಕಾಲದಲ್ಲಿ ಡಿಲ್ಲಿ ಸರಕಾರದೊಡನೆ ಅವರಿ ಗಿದ್ದ ಎಲ್ಲ ಸಂಬಂಧಗಳೂ ಕಳೆದು ಹೋದುವು. ಈ ಹೋರಾ ಟದ ಸಮಯದಲ್ಲಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡ ಅವರು ಡಿಲ್ಲಿಯಿಂದ ಆಗ್ರಾದಲ್ಲಿ ಬಂದು ನೆಲಸಿದರು.

ಮೋತೀಲಾಲರು ಸಾವಿರದ ಎಂಟುನೂರ ಅರುವತ್ತೊಂದ ನೆಯ ವರ್ಷದ ಮೇ ತಿಂಗಳ ಆರರಂದು ಹುಟ್ಟಿದರು. ಅವರ ತಂದೆಯ ಹೆಸರು ಗಂಗಾಧರ ನೆಹರು. ಮೋತೀಲಾಲ್ ತಾಯಿಯ ಹೊಟ್ಟೆಯಿಂದ ಹೊರಬರುವ ಮೊದಲೇ ಗಂಗಾಧರ ನೆಹರು ತೀರಿ ಕೊಂಡಿದ್ದರು. ಆದುದರಿಂದ ಅವರ ಬಾಲ್ಯವು ಅಣ್ಣಂದಿರಾದ ನಂದಲಾಲ ನೆಹರುಗಳ ಆಶ್ರಯದಲ್ಲಿ ಕಳೆಯಿತು.

ನಂದಲಾಲ ನೆಹರು ವಕೀಲರಾಗಿದ್ದರು. ಆದುದರಿಂದ ಅವರು ಆಗ್ರಾವನ್ನು ಬಿಟ್ಟು ಅಲ್ಲಹಾಬಾದಿನಲ್ಲಿ ಮನೆಮಾಡಬೇಕಾ ಯಿತು. ಅಂದಿನಿಂದ ಮೋತೀಲಾಲ ನೆಹರು ಅಲ್ಲಹಾಬಾದಿ ನಲ್ಲಿಯೇ ವಾಸಿಸತೊಡಗಿದರು.

ಮೋತೀಲಾಲರ ವಿದ್ಯಾಭ್ಯಾಸ ಕಾನ್‌ಪುರ ಮತ್ತು ಅಲ್ಲಹಾ ಬಾದಿನಲ್ಲಾಯಿತು. ಅವರು ಮೊದಲು ಕಲಿತುದು ಪರ್ಶಿಯನ್ ಮತ್ತು ಅರಬ್ಬಿ ಭಾಷೆಗಳನ್ನು; ಇಂಗ್ಲಿಷ್ ಕಲಿತುದು ಅನಂತರ. ಅವರು ಸಣ್ಣ ಪ್ರಾಯದಲ್ಲೇ ಪರ್ಶಿಯನ್ ಭಾಷೆಯಲ್ಲಿ ಪಂಡಿತ ರೆಂದು ಹೆಸರಾಗಿದ್ದರು. ಅವರ ಪಾಂಡಿತ್ಯಕ್ಕಾಗಿ ಅವರಿಂದ ಎಷ್ಟೋ ಹಿರಿಯರಾದವರು ಕೂಡ ಅವರಿಗೆ ಗೌರವ ಕೊಡುತ್ತಿದ್ದರು.

ಶಾಲೆಯಲ್ಲಿ ಮೋತೀಲಾಲರು ಒಳ್ಳೆಯ ವಿದ್ಯಾರ್ಥಿಯಾಗಿರಲಿಲ್ಲ. ಪುಸ್ತಕಕ್ಕಿಂತ ಆಟ ಓಟಗಳಲ್ಲೇ ಅವರಿಗೆ ಹೆಚ್ಚು ಪ್ರೀತಿ. ಕಾಲೇಜಿನಲ್ಲಿ ಅವರು ತುಂಟ ಹುಡುಗರ ಮುಖಂಡರಾಗಿದ್ದರು. ಇಂಗ್ಲಿಷರ ವೇಷ ಭೂಷಣ, ಅವರ ರೀತಿ ನೀತಿಗಳೆಂದರೆ ಅವರಿಗೆ ತುಂಬಾ ಮೆಚ್ಚಿಕೆ. ಅವರು ಪರೀಕ್ಷೆಗಾಗಿ ಹೆಚ್ಚು ಓದುತ್ತಿರಲಿಲ್ಲ. ಉತ್ತೀರ್ಣಹೊಂದಲು ಬೇಕಾದಷ್ಟು ಮಾತ್ರ ಓದುತ್ತಿದ್ದರು. ಕೊನೆಗೆ ಬಿ. ಎ. ಪರೀಕ್ಷೆಗೆ ಕುಳಿತರು. ಇಂಗ್ಲಿಷ್ ಭಾಷೆಯ ಮೊದಲನೆಯ ಪತ್ರಿಕೆಗೆ ಮಾತ್ರ ಉತ್ತರಿಸಿದರು. ಈ ಪತ್ರಿಕೆಗೆ ಚೆನ್ನಾಗಿ ಉತ್ತರ ಬರೆಯುದುದರಿಂದ ಉತ್ತೀರ್ಣ ಹೊಂದುವ ಹಾಗಿಲ್ಲ ಎಂದು ಅವರು ಉಳಿದ ಪತ್ರಿಕೆಗಳಿಗೆ ಉತ್ತರಿಸಲೇ ಇಲ್ಲ! ಆ ಮೇಲೆ ಅವರು ಬಿ. ಎ. ಪರೀಕ್ಷೆಗೆ ಕುಳಿತುಕೊಳ್ಳಲೂ ಇಲ್ಲ!!

ಆ ಕಾಲದಲ್ಲಿ ಸಾರ್ವಜನಿಕ ಜೀವನದಲ್ಲಿ ಹೆಸರು ಪಡೆಯ ಬೇಕಾದರೆ ವಕೀಲಿ ವೃತ್ತಿಯೊಂದೇ ದಾರಿಯಾಗಿತ್ತು. ನೆಹರು ಹೈಕೋರ್ಟು ವಕೀಲರ ಪರೀಕ್ಷೆಗೆ ಕುಳಿತರು. ಅದರಲ್ಲಿ ಅವರು ಪ್ರಥಮ ವರ್ಗದಲ್ಲಿ ತೇರ್ಗಡೆಯಾದುದು ಮಾತ್ರವಲ್ಲದೆ ಚಿನ್ನದ ಪದಕವನ್ನೂ ಗಳಿಸಿದರು.

ಮೋತೀಲಾಲ್ ನೆಹರುಗಳಿಗೆ ಸಾವಿರದ ಎಂಟುನೂರ ಎಂಭತ್ತೆರಡರಲ್ಲಿ ಮದುವೆಯಾಯಿತು. ಅವರ ಹೆಂಡತಿಯ ಹೆಸರು ಸ್ವರೂಪ್‌ರಾಣೀ ದೇವಿ. ಇಂದು ನಮ್ಮ ದೇಶದ ಪ್ರಧಾನ ಮಂತ್ರಿಗಳಾಗಿರುವ ಪಂ. ಜವಾಹರಲಾಲ ನೆಹುಗಳು ಇವರ ಹೊಟ್ಟೆಯಲ್ಲೇ ಹುಟ್ಟಿದರು. ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್ ಮತ್ತು ಕೃಷ್ಣಾ ಹತೀಸಿಂಗ್ ಇವರು ಮೋತೀಲಾಲ್–ಸ್ವರೂಪ್ ರಾಣಿಯರ ಪುತ್ರಿಯರು. ಇವರು ಕೂಡ ನಮ್ಮ ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಸೇವೆ ಸಲ್ಲಿಸಿ ಹೆಸರು ಗಳಿಸಿದ್ದಾರೆ.

ಮೋತೀಲಾಲ ನೆಹರು ವಕೀಲಿ ವೃತ್ತಿಯನ್ನು ಕೈಕೊಂಡ ಕೆಲವೇ ಸಮಯದಲ್ಲಿ ಅವರ ಅಣ್ಣ ನಂದಲಾಲರು ಅಕಸ್ಮಾತ್ತಾಗಿ ತೀರಿಕೊಂಡರು. ಅಂದಿನಿಂದ ಸಂಸಾರದ ಭಾರ ಮೋತೀಲಾಲರ ಮೇಲೆ ಬಿತ್ತು. ಸಂಸಾರ ನೌಕೆಯನ್ನು ಅವರು ಅತ್ಯಂತ ಯಶಸ್ವಿಯಾಗಿ ಸಾಗಿಸಿಕೊಂಡು ಹೋದರು.

ನೆಹರು ಮೊದಲ ಮೂರು ವರ್ಷಗಳ ವರೆಗೆ ಕಾನ್‌ಪುರದ ಜಿಲ್ಲಾ ಕೋರ್ಟಿನಲ್ಲಿ ವಕೀಲಿ ಕೆಲಸ ಮಾಡಿದರು. ಆ ಮೇಲೆ ಅಲ್ಲಹಾಬಾದ್ ಹೈಕೋರ್ಟನ್ನು ಸೇರಿದರು. ಅಲ್ಲಿ ವಕೀಲರಾಗಿ ಅವರು ಕೆಲವೇ ಸಮಯದಲ್ಲಿ ಹೆಚ್ಚಿನ ಯಶಸ್ಸುಗಳಿಸಿದರು. ವಕೀಲಿ ವೃತ್ತಿ ಅವರಿಗೆ ಬೇಕಾದಷ್ಟು ಹಣವನ್ನು ತಂದುಕೊಟ್ಟಿತು; ಕೀರ್ತಿಯನ್ನು ಗಳಿಸಿಕೊಟ್ಟಿತು.

ಮೋತೀಲಾಲ್ ನೆಹರು ತಮ್ಮ ಜೀವನದಲ್ಲಿ ತಡವಾಗಿಯೇ ರಾಜಕೀಯವನ್ನು ಪ್ರವೇಶಿಸಿದರು. ಆದರೂ ಅವರ ಮರಣದ ವರೆಗೂ ಭಾರತದ ರಾಜಕೀಯ ರಂಗದಲ್ಲಿ ಪ್ರಮುಖ ವ್ಯಕ್ತಿಯಾಗಿ ಉಳಿದರು. ಈ ಕಾಲದಲ್ಲಿ ಅವರನ್ನು ಗೌರವಿಸದವರಿರಲಿಲ್ಲ. ಬ್ರಿಟಿಷ್ ಸರಕಾರದವರು ಕೂಡ ಅವರಿಗೆ ಹೆದರುತ್ತಿದ್ದರು; ಹಾಗೆಯೇ ಗೌರವ ಕೊಡುತ್ತಲೂ ಇದ್ದರು.

"ಮಾನವ ಜನಾಂಗವನ್ನು ಆಳುವ ಅಧಿಕಾರ ಕೇವಲ ಕೆಲವೇ ಜನರಿಗೆ ಸೇರಿದ್ದಲ್ಲ; ಅದು ಸಾಮಾನ್ಯ ಜನರಿಗೆ ಸೇರಿದ್ದು." ಎಂಬ ಮಾತಿನಲ್ಲಿ ನೆಹರುಗಳಿಗೆ ಅತ್ಯಂತ ವಿಶ್ವಾಸವಿತ್ತು. ಅದಕ್ಕಾಗಿ ಅವರು ನಮ್ಮ ಮೇಲೆ ಅಧಿಕಾರ ನಡೆಸುತ್ತಿದ್ದ ವಿದೇಶೀಯರಾದ ಇಂಗ್ಲಿಷರ ವಿರುದ್ಧ ಚಳವಳಿ ನಡೆಸಿದರು.

ರಾಷ್ಟ್ರಸಭೆ (ಕಾಂಗ್ರೆಸ್)ಯಲ್ಲಿ ನೆಹರು ಮಂದಗಾಮಿಗಳ

ಗುಂಪಿಗೆ ಸೇರಿದವರಾಗಿದ್ದರು. ಆ ಕಾಲದಲ್ಲಿ ರಾಷ್ಟ್ರ ಸಭೆಯಲ್ಲಿ ಎರಡು ಗುಂಪುಗಳಿದ್ದುವು—ಒಂದು ಮುಂದಗಾಮಿಗಳ ಗುಂಪು; ಇನ್ನೊಂದು ತೀವ್ರಗಾಮಿಗಳ ಗುಂಪು. ಮುಂದಗಾಮಿಗಳು ಹೆಸರಿಗೆ ತಕ್ಕಂತೆ ಅಲ್ಪಸ್ವಲ್ಪ ಅಧಿಕಾರ ಸಿಕ್ಕಿದರೆ ಸಮಾಧಾನಪಡುವವರಾಗಿದ್ದರು. ತೀವ್ರಗಾಮಿಗಳು ಭಾರತೀಯರಿಗೆ ಜವಾಬ್ದಾರಿ ಸರಕಾರ ಕೊಡಬೇಕೆಂದು ಕೇಳುತ್ತಿದ್ದರು.

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕರು ವಿದೇಶೀಯರೂ ಕೆಲಸಮಾಡಿದ್ದಾರೆ. ಅಂತಹವರಲ್ಲಿ ಶ್ರೀಮತಿ ಆನ್ನಿ ಬಿಸೆಂಟರು ಅತ್ಯಂತ ಪ್ರಮುಖರು. ಇವರು ಹುಟ್ಟಿದ್ದು ಅಯರ್ ಲೆಂಡಿನಲ್ಲಿ; ಆದರೆ ತಮ್ಮ ಜೀವನದ ಬಹುಕಾಲವನ್ನು ನಮ್ಮ ದೇಶದಲ್ಲಿ ಕಳೆದರು. ಶ್ರೀಮತಿ ಬಿಸೆಂಟರು ಸಾವಿರದ ಒಂಭೈನೂರ ಹದಿನಾರರಲ್ಲಿ "ಹೋಮ್ ರೂಲ್" ಚಳವಳಿಯನ್ನು ಪ್ರಾರಂಭಿಸಿದರು. ಹೋಮ್‌ರೂಲ್ ಚಳುವಳಿಯ ತಾತ್ಪರ್ಯ 'ನಮ್ಮ ದೇಶವನ್ನು ನಾವೇ ಆಳಬೇಕು' ಎಂದು. ಆನ್ನಿಬಿಸೆಂಟರ ಈ ಹೊಸ ಚಳವಳಿ ದೇಶದಲ್ಲೆಲ್ಲ ಬಿರುಗಾಳಿಯಂತೆ ಹಬ್ಬಿತು. ಈ ಬಿರುಗಾಳಿಯಿಂದ ತಪ್ಪಿಸಿಕೊಳ್ಳುವುದು ನೆಹರುಗಳಿಗೂ ಸಾಧ್ಯವಾಗಲಿಲ್ಲ. ಮುಂದಗಾಮಿಗಳ ಗುಂಪಿಗೆ ಸೇರಿದವರಾದರು ಕೂಡ ಅವರು ಚಳವಳಿಯಲ್ಲಿ ಸೇರಿಕೊಂಡರು; ಅದರ ಮುಂದಾಳುಗಳಲ್ಲೊಬ್ಬರಾದರು.

ಹೋಮ್ ರೂಲ್ ಚಳವಳಿಯು ನಿದ್ದೆಯಲ್ಲಿದ್ದ ಭಾರತೀಯರನ್ನು ಎಚ್ಚರಿಸಿತು. ಅದೇ ಸಮಯದಲ್ಲಿ ಬ್ರಿಟಿಷರು ಮೊದಲನೆಯ ಮಹಾಯುದ್ಧದಲ್ಲಿ ಕಾದಾಡುತ್ತಿದ್ದರು. ಆದುದರಿಂದ ಅವರು ಭಾರತೀಯರ ಹೊಸ ಚಳವಳಿಯಿಂದ ಭಯಗೊಂಡರು.

ಸಾವಿರದ ಒಂಭೈನೂರ ಹದಿನೇಳನೆಯ ವರ್ಷದ ಅಗಸ್ಟ್ ತಿಂಗಳಿ ನಲ್ಲಿ ಬ್ರಿಟಿಷ್ ಸರಕಾರವು, ಭಾರತಕ್ಕೆ ಜವಾಬ್ದಾರಿ ಸರಕಾರ ಕೊಡುವುದೇ ತನ್ನ ಧೋರಣೆಯ ಕೊನೆಯ ಗುರಿಯಾಗಿದೆ ಎಂದು ಸಾರಿತು. ಸರಕಾರದ ಈ ಘೋಷಣೆಯನ್ನು ಭಾರತದ ಮುಖಂಡರು ಸ್ವಾಗತಿಸಿದರು. ಆದರೆ ಸರಕಾರದವರು ಜೈಲಿ ನಲ್ಲಿದ್ದ ಎಲ್ಲರನ್ನೂ ಬಿಡುಗಡೆಮಾಡಲಿಲ್ಲ; ಜನರ ಮೇಲೆ ನಡೆಸು ತ್ತಿದ್ದ ದಬ್ಬಾಳಿಕೆಯನ್ನೂ ನಿಲ್ಲಿಸಲಿಲ್ಲ.

ಮೊದಲನೆಯ ಮಹಾಯುದ್ಧ ಮುಗಿಯಿತು. ಬ್ರಿಟಿಷರು ಭಾರತೀಯರಿಗೆ ಜವಾಬ್ದಾರಿ ಸರಕಾರ ಕೊಡುವುದರ ಬದಲು ಅವರ ಮೇಲೆ ಇನ್ನೂ ಹೆಚ್ಚಿನ ದಬ್ಬಾಳಿಕೆ ನಡೆಯಿಸಿದರು. ರೌಲೆಟ್ ಕಾಯಿದೆಯು ಬಂತು. ಈ ಕಾಯಿದೆಯ ಮೂಲಕ ಸರಕಾ ರವು ಭಾರತೀಯರಿಗಿದ್ದ ಅಲ್ಪಸ್ವಲ್ಪ ಸ್ವಾತಂತ್ರ್ಯವನ್ನೂ ಕಸಿದು ಕೊಂಡಿತು; ಭಾರತೀಯರ ಮೇಲೆ ಇನ್ನೂ ಹೆಚ್ಚಿನ ಕ್ರೂರ ದಬ್ಬಾಳಿಕೆ ನಡೆಸಲು ಸರಕಾರಕ್ಕೆ ಅಧಿಕಾರ ದೊರೆಯಿತು. ಭಾರತದ ಜನರು ಈ ಹೊಸ ಕಾನೂನನ್ನು ಬಹಳವಾಗಿ ವಿರೋಧಿ ಸಿದರು. ಕೇಂದ್ರ ಶಾಸನ ಸಭೆಯಲ್ಲಿ ಸದಸ್ಯರಾಗಿದ್ದ ಮುಂದ ಗಾಮಿ ಗುಂಪಿನ ಮುಂದಾಳುಗಳು ರೌಲೆಟ್ ಮಸೂದೆಯನ್ನು ತೀವ್ರವಾಗಿ ಖಂಡಿಸಿದರು. ಆದರೆ ಸರಕಾರ ಇದೊಂದನ್ನೂ ಲೆಕ್ಕಿ ಸದೆ ಮಸೂದೆ ಸ್ವೀಕೃತವಾಗುವಂತೆ ಮಾಡಿತು. ಇದರಿಂದ ಜನ ರಲ್ಲಿ ಅತೃಪ್ತಿ ಇಮ್ಮಡಿಸಿತು. ರಾಜಕೀಯ ವಾತಾವರಣದಲ್ಲಿ ಪುನಃ ಕತ್ತಲು ಕವಿಯಿತು.

ಗಾಂಧೀಜಿ ಆಗ ತಾನೆ ದಕ್ಷಿಣ ಆಫ್ರಿಕದಿಂದ ಹಿಂದಿರುಗಿ ದ್ದರು. ಅಲ್ಲಿಯ ಸರಕಾರಕ್ಕೆ ವಿರೋಧವಾಗಿ ಅವರು ದೊರಕಿಸಿ

ಕೊಂಡ ಜಯ ಅವರಿಗೆ ಹೆಸರು ತಂದಿತ್ತು. ಭಾರತದಲ್ಲಿ ಸರಕಾರದ ಮನವೊಲಿಸುವ ಮಂದಗಾಮಿ ಗುಂಪಿನ ನೀತಿಯ ವಿಫಲತೆಯನ್ನು ಅವರು ಕಂಡರು. ನಿಶ್ಶಸ್ತ್ರ ಜನತೆಗೆ ಇನ್ನು ಉಳಿದಿರುವ ಒಂದೇ ಒಂದು ದಾರಿ ಸತ್ಯಾಗ್ರಹ. ಗಾಂಧೀಜಿ ತಮ್ಮ ಸೂಚನೆಯನ್ನು ಮುಂದೆ ಮಾಡಿದಾಗ ಅವರೊಡನೆ ಮೊದಲು ಸೇರಿಕೊಂಡವರು ಮೋತೀಲಾಲ ನೆಹರು.

ಸಾವಿರದ ಒಂಭೈನೂರ ಹತ್ತೊಂಭತ್ತನೆಯ ಮಾರ್ಚ್ ಮೂವತ್ತನ್ನು ಗಾಂಧೀಜಿ ಹರತಾಳ ದಿನವಾಗಿ ಸಾರಿದರು. ಹರತಾಳ ಶಾಂತಿಯ ಮಾರ್ಗ ಬಿಟ್ಟು ಕೆಲವೆಡೆ ಹಿಂಸೆಗೆ ಇಳಿಯಿತು. ಪಂಜಾಬಿನಲ್ಲಿ ಸತ್ಯಾಗ್ರಹವು ವಿಶೇಷ ರೂಪವನ್ನು ತಾಳಿತು. ಸರಕಾರ ಕ್ರೂರ ರೀತಿಯಿಂದ ಚಳವಳಿಯನ್ನು ಹತ್ತಿಕ್ಕಲು ಪ್ರಾರಂಭಿಸಿತು. ಸರಕಾರದವರು ಜಾಲಿಯನ್‌ವಾಲಾಬಾಗಿನಲ್ಲಿ ನಡೆಸಿದ ಅತ್ಯಾಚಾರ ಇಡೀ ದೇಶವನ್ನೇ ಸಿಟ್ಟಿಗೆಬ್ಬಿಸಿತು.

ಇದೇ ಸಂದರ್ಭದಲ್ಲಿ ಸರಕಾರ ಕೆಲವು ಸುಧಾರಣೆಗಳನ್ನು ತಂದಿತು. ಮೋತೀಲಾಲ ನೆಹರು, ಮಹಾತ್ಮಾಗಾಂಧಿ ಮೊದಲಾದ ರಾಷ್ಟ್ರಸಭೆಯ ಮುಂದಾಳುಗಳು ಸರಕಾರದೊಡನೆ ಸಂಧಿ ಮಾಡಿಕೊಂಡು ಕೆಲವು ಶರತಗಳೊಡನೆ ಸುಧಾರಣೆಗಳನ್ನು ಒಪ್ಪಿಕೊಂಡರು. ವಾತಾವರಣ ಪುನಃ ಶಾಂತವಾಗುವಂತೆ ತೋರಿತು.

ದಶಂಬರ ತಿಂಗಳಲ್ಲಿ ರಾಷ್ಟ್ರಸಭೆಯ ವಾರ್ಷಿಕ ಅಧಿವೇಶನವು ಅಮೃತಸರದಲ್ಲಿ ಸೇರಿತು. ಪಂ. ಮೋತೀಲಾಲ ನೆಹರು ಈ ಅಧಿವೇಶನದ ಅಧ್ಯಕ್ಷರಾದರು.

ಮೋತೀಲಾಲರ ಅಧ್ಯಕ್ಷ ಭಾಷಣ ಅವರ ಮಂದಗಾಮಿ ನೀತಿಗೆ ತಕ್ಕುದಾಗಿಯೇ ಇತ್ತು. ಬ್ರಿಟಿಷ್ ದೊರೆಗಳು 'ದಯ

ಪಾಲಿಸಿದ' 'ಸುಧಾರಣೆ'ಗಳನ್ನು ದೇವರ ಪ್ರಸಾದವೆಂದು ಸ್ವೀಕರಿಸಿದರು. ಅವರನ್ನು ಅಭಿನಂದಿಸಿದರು; ಬಾಯಿತುಂಬ ಹೊಗಳಿದರು. ತೀವ್ರಗಾಮಿಗಳೆಂದು ಪರಿಗಣಿಸಲಾಗುತ್ತಿದ್ದ ಗಾಂಧೀಜಿ ಕೂಡ ಬ್ರಿಟಿಷರನ್ನು ಸಂತೈಸಿ ಅವರ ಮನವೊಲಿಸಹೋದರು.

ಆದರೆ ಗಾಂಧೀಜಿ ಆ ಮೇಲೆ ತಮ್ಮ ಸೋಲನ್ನು ತಾವೇ ಒಪ್ಪಿಕೊಳ್ಳಬೇಕಾಯಿತು. ಬ್ರಿಟಿಷರ ಹೃದಯ ಪರಿವರ್ತನೆ ಮಾಡಲು ಅವರಿಂದಾಗಲಿಲ್ಲ.

ಸಾವಿರದ ಒಂಭೈನೂರ ಇಪ್ಪತ್ತರಲ್ಲಿ ಕಲ್ಕತ್ತದಲ್ಲಿ ಜರಗಿದ ರಾಷ್ಟ್ರಸಭೆಯ ವಿಶೇಷ ಅಧಿವೇಶನದಲ್ಲಿ ಗಾಂಧೀಜಿ ಅಸಹಕಾರ ಚಳವಳಿಯ ಕುರಿತು ಒಂದು ಸೂಚನೆಯನ್ನು ತಂದರು. ಮೋತೀಲಾಲ್ ಮತ್ತು ಮುಂದಗಾಮಿ ಗುಂಪಿನ ಇನ್ನೊಬ್ಬರು ಮುಖಂಡರಾದ ಸಿ. ಆರ್. ದಾಸರು ಅದನ್ನು ವಿರೋಧಿಸಿರು. ಆದರೂ ಗಾಂಧೀಜಿಯ ಸೂಚನೆ ಸ್ವೀಕಾರಪಡೆಯಿತು. ಅದೇ ವರ್ಷ ನಾಗಪುರದಲ್ಲಿ ಸೇರಿದ ರಾಷ್ಟ್ರಸಭೆಯ ವಾರ್ಷಿಕ ಅಧಿವೇಶನದಲ್ಲಿ ಗಾಂಧೀಜಿಯ ಗೊತ್ತುವಳಿಗೆ ಬೆಂಬಲ ದೊರಕಿತು. ವಿರೋಧಿಸಲೆಂದು ಹೋದ ಮೋತೀಲಾಲ್ ಮತ್ತು ದಾಸರೇ ಅವರ ಕೈಯೊಳಗಾದರು!

ಮೋತೀಲಾಲರು ಮುಂದೆ ಅಸಹಕಾರ ಚಳವಳದಲ್ಲಿ ಮನಃಪೂರ್ವಕವಾಗಿ ಸೇರಿಕೊಂಡರು. ಅವರೊಡನೆ ಜವಾಹರಲಾಲರೂ ಗಾಂಧೀ ವಿಧಾನವನ್ನು ಅನುಸರಿಸಿದರು. ಚಳವಳವನ್ನು ಸೇರುವ ಮೊದಲು ಅವರಿಬ್ಬರೂ ತಮಗೆ ಅಪಾರ ಹಣ ತರುತ್ತಿದ್ದ ವಕೀಲಿ ವೃತ್ತಿಯನ್ನು ತ್ಯಜಿಸಿದರು.

ಅಸಹಕಾರ ಚಳವಳಿಯಲ್ಲಿ ಸೇರಿದಂದಿನಿಂದ ನೆಹರುಗಳ

ಜೀವನದಲ್ಲಿ ವಿಶೇಷ ಬದಲಾವಣೆಯಾಯಿತು. ಹಿಂದಿನಂತೆ ಸುಖದ ಜೀವನ ಇನ್ನಿಲ್ಲ. ವಕೀಲಿ ವೃತ್ತಿಯಿಂದ ಅವರಿಗೆ ಅಷ್ಟು ಹಣ ಬರುತ್ತಿದ್ದರೂ ಕಷ್ಟದ ದಿನಗಳಿಗೆಂದು ಕೂಡಿಡುವ ಅಭ್ಯಾಸ ಅವರಿಗಿರಲಿಲ್ಲ. ಆದುದರಿಂದ ಅವರು ಜೀವನಕ್ಕಾಗಿ ಕಷ್ಟಪಡ ಬೇಕಾಯಿತು. ಮನೆಯಲ್ಲಿದ್ದ ಬೆಲೆಬಾಳುವ ಸಾಮಾನುಗಳನ್ನೆಲ್ಲಾ ಒಂದೊಂದಾಗಿ ಮಾರಿದರು; ಸೇವಕರನ್ನು ಕಡಿಮೆಮಾಡಿದರು; ಅವರ ಪ್ರೀತಿಯ ಕುದುರೆಗಳನ್ನು ಕೂಡ ಅಗಲಬೇಕಾಯಿತು.

ಅಸಹಕಾರ ಚಳವಳಿ ದೇಶದ ವಿವಿಧ ಭಾಗಗಳಲ್ಲಿ ಯಶಸ್ವಿ ಯಾಗಿ ನಡೆಯಿತು. ಯುಕ್ತ ಪ್ರಾಂತ (ಈಗಿನ ಉತ್ತರ ಪ್ರದೇಶ) ದಲ್ಲಿ ಮೋತೀಲಾಲ್ ನೆಹರುಗಳೇ ಚಳವಳಿಯ ಮುಂದಾಳಾದರು.

ಬರಬರುತ್ತಾ ಸರಕಾರವು ಚಳವಳಿಯನ್ನು ಕ್ರೂರವಾಗಿ ಹತ್ತಿಕ್ಕಲು ಪ್ರಾರಂಭಿಸಿತು. ನೂರಾರು ಜನರು ಸೆರೆಮನೆಯನ್ನು ಸೇರಿದರು. ಜನರು ಅದಕ್ಕೆ ತಯಾರಾಗಿಯೇ ಇದ್ದರು.

ಇದೇ ಸಂದರ್ಭದಲ್ಲಿ ಬ್ರಿಟಿಷ್ ಯುವರಾಜರು ಹಿಂದುಸ್ತಾ ನಕ್ಕೆ ಬರುವುದೆಂದಾಯಿತು. ಅವರು ಹಿಂದುಸ್ತಾನಕ್ಕೆ ಬಂದಿಳಿದ ದಿನ, ಬ್ರಿಟಿಷ್ ಆಡಳಿತದ ಮೇಲೆ ಭಾರತದ ಜನರಿಗಿರುವ ಅಸಂತೃಪ್ತಿಯನ್ನು ವ್ಯಕ್ತಪಡಿಸುವುದಕ್ಕಾಗಿ ಇಡೀ ದೇಶದಲ್ಲಿ ಹರತಾಳವನ್ನು ಆಚರಿಸಬೇಕೆಂದು ರಾಷ್ಟ್ರಸಭೆ ಕರೆಕೊಟ್ಟಿತು.

ಯುವರಾಜರು ಬರುವ ಕೆಲವು ದಿನಗಳ ಮುಂಚಿತವಾಗಿ ಅಲ್ಲಹಾಬಾದಿನ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಪಂ. ನೆಹರುಗಳಿಗೆ ಒಂದು ಪತ್ರ ಬಂತು. ಅವರೊಳಗೆ ಆಗಾಗ ಪತ್ರ ವ್ಯವಹಾರ ನಡೆಯುವ ವಾಡಿಕೆಯಿತ್ತು. ಆದರೆ ಆ ದಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಒಬ್ಬ ಬಂದುದನ್ನು ನೋಡಿ ನೆಹರುಗಳಿಗೆ ಆಶ್ಚರ್ಯ

ವಾಯಿತು. ಪತ್ರವನ್ನು ಓದಿದರು. ಯುವರಾಜರು ಬರುವ ಸಂದರ್ಭದಲ್ಲಿ ನೆಹರುಗಳಿಗೆ ಸೇರಿದ ಭೂಮಿಯನ್ನು ಸರಕಾರಕ್ಕೆ ಬೇಕಾದಂತೆ ಉಪಯೋಗಿಸಲು ಬಿಡಬೇಕೆಂದು ಅದರಲ್ಲಿ ಅಪ್ಪಣೆಯಾಗಿತ್ತು. ತನ್ನ ಆಸ್ತಿಯನ್ನು ಉಪಯೋಗಿಸುವ ಅಧಿಕಾರ ಮ್ಯಾಜಿಸ್ಟ್ರೇಟರಿಗಿಲ್ಲ ಎಂದು ಮೋತೀಲಾಲ್ ಕಂಡಿತವಾದ ಉತ್ತರವನ್ನಿತ್ತರು. ಆದರೂ ಯುವರಾಜರಿಗೆ ಯಾವ ಅಪಾಯವೂ ಆಗದಂತೆ ನೋಡಿಕೊಳ್ಳುವ ಭಾರ ತನ್ನ ಮೇಲೆ ಎಂದು ನೆಹರು ಆಶ್ವಾಸನೆಯನ್ನೂ ಕೊಟ್ಟರು.

ಯುವರಾಜರು ಬಂದರು. ಆಗ ಅಲ್ಲಹಾಬಾದಿನ ಬೀದಿಗಳೆಲ್ಲ ಬರಿದಾಗಿದ್ದುವು. ಅಂಗಡಿಗಳೆಲ್ಲ ಮುಚ್ಚಿದ್ದುವು. ನೆಹರುಗಳು ಆಶ್ವಾಸನೆಯಿತ್ತಂತೆ ಯುವರಾಜರ ಜೀವಕ್ಕೆ ಯಾವ ಅಪಾಯವೂ ಬರಲಿಲ್ಲ!

ಸಾವಿರದ ಒಂಭೈನೂರ ಇಪ್ಪತ್ತೊಂದು, ದಶಂಬರ ಆರು. ಅಂದು ಪೋಲೀಸರು ಒಮ್ಮೆಲೇ ನೆಹರುಗಳು ವಾಸಿಸುತ್ತಿದ್ದ ಆನಂದ ಭವನವನ್ನು ಮುತ್ತಿದರು. ಮೋತೀಲಾಲ್ ಮತ್ತು ಜವಾಹರಲಾಲ್ ಇವರನ್ನು ಸೆರೆಹಿಡಿದರು.

ಮರುದಿನ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಅವರ ವಿಚಾರಣೆಯಾಯಿತು. ನೆಹರುಗಳಿಗೆ ವಿರೋಧವಾಗಿ ವಾದಿಸಿದ ಸರಕಾರಿ ವಕೀಲರು ಅವರ ಹತ್ತಿರದ ಒಬ್ಬರು ಗೆಳೆಯರೆ. ತನ್ನ ಮಿತ್ರನಿಗೆ ವಿರೋಧವಾಗಿ ವಾದಿಸಲು ಅವರಿಗೇ ನಾಚಿಕೆಯಾಯಿತು. ಆದರೆ ಮಾಡುವುದೇನು? ಸರಕಾರಕ್ಕೆ ವಿರೋಧ ಹೋಗುವ ಧೈರ್ಯ ಅವರಲ್ಲಿರಲಿಲ್ಲ. ತಂದೆ, ಮಗ ಇಬ್ಬರಿಗೂ ಆರಾರು ತಿಂಗಳ ಶಿಕ್ಷೆಯಾಯಿತು. ಆಗ "ಈ ಅಹಿಂಸಾತ್ಮಕ ಅಸಹಕಾರ

ಚಳವಳಿಯನ್ನು ಸ್ವರಾಜ್ಯ ಸಿಕ್ಕುವ ವರೆಗೂ ಮುಂದುವರಿಸಿರಿ" ಎಂದು ನೆಹರು ಭಾರತದ ಜನರಿಗೆ ಸಂದೇಶಕೊಟ್ಟರು.

ಅಸಹಕಾರ ಚಳವಳಿಯು ಕೆಲವೆಡೆಗಳಲ್ಲಿ ಹಿಂಸಾರೂಪ ವನ್ನು ತಾಳಿತ್ತು. ಇದನ್ನು ನೋಡಿ ಗಾಂಧೀಜಿ ಸಾಮೂಹಿಕ ಅಸಹಕಾರವನ್ನು ಬಿಟ್ಟು ಮುಖ್ಯವಾಗಿ ರಚನಾತ್ಮಕ ಕಾರ್ಯ ಕ್ರಮಗಳಲ್ಲಿ ತೊಡಗಬೇಕೆಂದು ಅಪೇಕ್ಷಿಸಿದರು. ಚೌರಿಚೌರ ಮತ್ತು ಇತರ ಕಡೆಗಳಲ್ಲಿ ನಡೆದ ಗಲಭೆಯನ್ನು ನೋಡಿ ದೇಶವು ಇನ್ನೂ ಸಾಮೂಹಿಕ ಅಹಿಂಸಾತ್ಮಕ ಹೋರಾಟಕ್ಕೆ ಸಿದ್ಧವಾಗಿಲ್ಲ ಎಂಬುದನ್ನು ಅವರು ಮನಗಂಡರು. ಸಾಮೂಹಿಕ ಚಳವಳಿ ಯನ್ನು ನಿಲ್ಲಿಸಿದರು.

ಗಾಂಧೀಜಿಯನ್ನು ಕಂಡರೆ ಬ್ರಿಟಿಷರು ಹೆದರುತ್ತಿದ್ದರು. ದೇಶದ ಎಲ್ಲ ಚಳವಳಿಗೂ ಅವರೇ ಮೂಲ ಕಾರಣ ಎಂದು ಅವರು ನಂಬಿದ್ದರು. ಆದುದರಿಂದ, ಸಾವಿರದ ಒಂಭೈನೂರ ಇಪ್ಪತ್ತೆರಡನೆಯ ಮಾರ್ಚ್ ಹತ್ತರಂದು ಸರಕಾರಕ್ಕೆ ದ್ರೋಹ ಮಾಡಿದರೆಂಬ ಆರೋಪದ ಮೇಲೆ ಅವರಿಗೆ ಆರು ವರ್ಷಗಳ ಶಿಕ್ಷೆಯಾಯಿತು. ಗಾಂಧೀಜಿಯವರು ಸೆರೆ ಸೇರಿದ ನಾಲ್ಕಾರು ತಿಂಗಳುಗಳಲ್ಲೇ ಜನರಲ್ಲಿದ್ದ ಉತ್ಸಾಹವೆಲ್ಲ ಕುಗ್ಗಿಹೋಯಿತು. ರಾಜಕೀಯ ವಾತಾವರಣ ಪುನಃ ತಣಿಯಿತು.

ಸಾವಿರದ ಒಂಭೈನೂರ ಇಪ್ಪತ್ತೆರಡು ಜೂನ್ ಆರರಂದು ಮೋತೀಲಾಲ್ ನೆಹರು ಸೆರೆಯಿಂದ ಬಿಡುಗಡೆ ಹೊಂದಿದರು. ಮರುದಿನವೇ ಲಕ್ನೋವಿನಲ್ಲಿ ರಾಷ್ಟ್ರಸಭೆಯ ಸದಸ್ಯರು ಒಟ್ಟು ಕೂಡಿದರು. ಇದೇ ಸಭೆಯಲ್ಲಿ ಅಸಹಕಾರ ಚಳವಳದ ಕುರಿತು ಪರಿಶೀಲನೆ ನಡೆಸಿ ವರದಿ ಒಪ್ಪಿಸುವುದಕ್ಕಾಗಿ ಒಂದು ಸಮಿತಿ

ಯನ್ನು ರಚಿಸಿದರು. ಮೋತೀಲಾಲ್ ಸಮಿತಿಯ ಅಧ್ಯಕ್ಷರಾದರು. ಅಸಹಕಾರ ಚಳವಳವನ್ನು ನಿಲ್ಲಿಸಿ, ಚುನಾವಣೆಯಲ್ಲಿ ಭಾಗವಹಿಸಿ ಸರಕಾರದ ಒಳಗಿದ್ದುಕೊಂಡು ಅಧಿಕಾರಶಾಹಿಯೊಡನೆ ಹೊರಾಡಬೇಕೆಂದು ಈ ಸಮಿತಿ ಸೂಚಿಸಿತು.

ಶಾಸನ ಸಭೆಗಳನ್ನು ಪ್ರವೇಶಿಸುವ ಈ ಧೋರಣೆ ಸಾಮಾನ್ಯ ಜನರಿಗೆ ಸರಿಕಾಣಲಿಲ್ಲ. ಗಾಂಧೀಜಿಯ ಅಸಹಕಾರ ಆಂದೋಲನದಲ್ಲಿ ಅವರಿಗೆ ಅಚಲ ವಿಶ್ವಾಸ. ಮೋತೀಲಾಲ ನೆಹರು, ದೇಶಬಂಧು ದಾಸ್ ಮೊದಲಾದ ಮುಂದಗಾಮಿಗಳು ಶಾಸನ ಸಭೆಗಳನ್ನು ಪ್ರವೇಶಿಸಬೇಕೆಂಬ ಪಕ್ಷ ವಹಿಸಿದರು. ಜವಾಹರಲಾಲ್ ನೆಹರು ಮಾತ್ರ ತಂದೆಗೆ ಎದುರಾಗಿ ಶಾಸನ ಸಭೆಗಳಿಂದ ಹೊರಗುಳಿಯಬೇಕೆನ್ನುವವರ ಪ್ರಬಲ ಬೆಂಬಲಿಗರಾಗಿ ನಿಂತರು.

ಆದೇ ದಶಂಬರ ತಿಂಗಳಲ್ಲಿ ಗಯೆಯಲ್ಲಿ ಸೇರಿದ ರಾಷ್ಟ್ರ ಸಭೆಯ ಅಧಿವೇಶನದಲ್ಲಿ ಮೋತೀಲಾಲ ನೆಹರುಗಳು ಶಾಸನ ಸಭಾ ಪ್ರವೇಶದ ಕುರಿತು ಗೊತ್ತುವಳಿಯೊಂದನ್ನು ಮಂಡಿಸಿದರು. ಗೊತ್ತುವಳಿ ಮಾತ್ರ ಪ್ರಬಲ ವಿರೋಧದಿಂದ ಬಿದ್ದುಹೋಯಿತು. ಮೋತೀಲಾಲ್, ದೇಶಬಂಧು ದಾಸ್ ಮೊದಲಾದವರು ಇದರಿಂದ ಧೈರ್ಯಗುಂದದೆ "ಕಾಂಗ್ರೆಸ್ ಖಿಲಾಫತ್ ಸ್ವರಾಜ್ಯ ಸಂಘ" ಎಂಬ ಹೆಸರಿನ ಹೊಸಪಕ್ಷವನ್ನು ಸ್ಥಾಪಿಸಿದರು. ಆ ಮೇಲೆ ಇದುವೇ "ಸ್ವರಾಜ್ಯ ಪಕ್ಷ" ಎಂದು ಹೆಸರು ಪಡೆಯಿತು. ಪ್ರಾರಂಭದಿಂದಲೇ ದೇಶಬಂಧುದಾಸ್ ಈ ಪಕ್ಷದ ಅಧ್ಯಕ್ಷರಾಗಿದ್ದರು; ಮೋತೀಲಾಲ್ ನೆಹರು ಕಾರ್ಯದರ್ಶಿಗಳಾಗಿದ್ದರು.

ಮತ್ತೆ ಡಿಲ್ಲಿಯಲ್ಲಿ ಸೇರಿದ ರಾಷ್ಟ್ರಸಭೆಯ ವಿಶೇಷ ಅಧಿವೇಶನದಲ್ಲಿ ಸಭಾಪ್ರವೇಶದ ಮೇಲಿದ್ದ ನಿರ್ಬಂಧವನ್ನು

ತೆಗೆಯುವ ಗೊತ್ತುವಳಿ ಸ್ವೀಕಾರವಾಯಿತು. ಸ್ವರಾಜ್ಯ ಪಕ್ಷ ದವರು ಚುನಾವಣೆಯಲ್ಲಿ ಭಾಗವಹಿಸಿದರು; ಸಾಕಷ್ಟು ಸಂಖ್ಯೆ ಯಲ್ಲಿ ವಿಜಯಿಗಳಾಗಿಯೂ ಬಂದರು. ಮೋತೀಲಾಲ್ ನೆಹರು ಗಳು ಕೇಂದ್ರ ಶಾಸನಸಭೆಯಲ್ಲಿ ವಿರೋಧಿ ಪಕ್ಷದ ನಾಯಕರಾದರು.

ನೆಹರುಗಳು ಕೆಲವು ಸುಧಾರಣೆಗಳನ್ನೊಳಗೊಂಡ ಪ್ರಸಿದ್ಧ ವಾದ ರಾಷ್ಟ್ರೀಯ ಬೇಡಿಕೆಯನ್ನು ಶಾಸನ ಸಭೆಯ ಮುಂದಿಟ್ಟರು. ಆದರೆ ಸರಕಾರ ಅದನ್ನು ಪೂರೈಸುವಂತಿಲ್ಲ ಎಂದು ಕಂಡಿತವಾಗಿ ಹೇಳಿತು. ಆದುದರಿಂದ ಸ್ವರಾಜ್ಯ ಪಕ್ಷದವರು ಶಾಸನ ಸಭೆಗೆ ರಾಜಿನಾಮೆ ಕೊಟ್ಟರು.

ಇದೇ ಸಮಯದಲ್ಲಿ ದೇಶದ ಹಲವು ಭಾಗಗಳಲ್ಲಿ ಜಾತೀ ಯತೆಯು ಕಿಚ್ಚೆದ್ದಿತು. ಹಲವು ಮಂದಿ ರಾಷ್ಟ್ರೀಯ ಮುಖಂಡರು ಕೂಡ ಈ ಕೆಟ್ಟ ಕಲಹದಲ್ಲಿ ಪಾಲುಗಾರರಾದರು. ಈ ಸಮಯ ದಲ್ಲಿ ದುಷ್ಟ ಜಾತೀಯತೆಯಿಂದ ಹೊರಗುಳಿದ ಕೆಲವೇ ಮುಖಂಡ ರಲ್ಲಿ ನೆಹರು ಒಬ್ಬರು.

ಸಾವಿರದ ಒಂಭೈನೂರ ಮೂವತ್ತರಲ್ಲಿ ರಾಷ್ಟ್ರಸಭೆಯ ಅಧ್ಯಕ್ಷರಾಗಿದ್ದ ಜವಾಹರಲಾಲ ನೆಹರುಗಳು ಬಂಧಿತರಾದಾಗ ಅಧ್ಯಕ್ಷಪದದ ಭಾರ ಪುನಃ ಮೋತೀಲಾಲರ ಮೇಲೆ ಬಿತ್ತು. ಆ ವೃದ್ಧಾಪ್ಯದಲ್ಲಿಯೂ ಅವರು ತಮ್ಮ ದೈಹಿಕ ಕಷ್ಟಗಳನ್ನು ನೆನಸದೆ, ರಾಷ್ಟ್ರಸೇವೆಯೊಂದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಆ ಹೊರೆಯನ್ನು ಹೊತ್ತುಕೊಂಡರು. ಆದರೆ ಸ್ವಲ್ಪವೇ ಸಮಯದಲ್ಲಿ ಅವರು ಬಂಧಿತರಾಗಿ ಆರು ತಿಂಗಳ ಶಿಕ್ಷೆಗೆ ಗುರಿಯಾದರು.

ಹಲವಾರು ವರ್ಷಗಳ ಸೇವೆಯಿಂದ ಮತ್ತು ಸೆರೆಮನೆ ವಾಸದಿಂದ ಜರ್ಜಿತವಾದ ದೇಹ ಮೋತೀಲಾಲರದು. ಅದರ

ಮೇಲೆ ಆಗಲೇ ವಯಸ್ಸು ಏರುತ್ತಾ ಬಂದಿತ್ತು. ಇದರಿಂದಾಗಿ ಸೆರೆಮನೆಯಲ್ಲಿದ್ದಾಗ ಅವರ ಆರೋಗ್ಯ ಕುಂದುತ್ತಾ ಬಂತು. ಸರಕಾರ ಅವರನ್ನು ಬಿಡುಗಡೆ ಮಾಡಿದ್ದು ಪರಿಸ್ಥಿತಿ ಬಹಳ ಕಠಿಣಕ್ಕೆ ಮುಟ್ಟಿತು ಎಂದಾಗಲೇ.

ಸೆರೆಮನೆಯಿಂದ ಬಿಡುಗಡೆಯಾದ ಕೂಡಲೇ ಮೋತೀ ಲಾಲರು ಆರೋಗ್ಯವನ್ನು ಸುಧಾರಿಸುವುದಕ್ಕಾಗಿ ಮುಸ್ಸೂರಿಗೆ ತೆರಳಿದರು. ಕೆಲವು ದಿನಗಳಲ್ಲಿ ಪರಿಸ್ಥಿತಿ ಉತ್ತಮವಾದೊಡ ನೆಯೇ ಅಲ್ಲಹಾಬಾದಿಗೆ ಹಿಂದಿರುಗಿ ಬಂದರು. ಆದರೆ ಅವರು ಪೂರ್ಣ ಆರೋಗ್ಯ ಹೊಂದಲಿಲ್ಲ. ಬದಲಾಗಿ, ಕಾಯಿಲೆ ಪುನಃ ಜೋರಾಗುತ್ತಾ ಬಂತು.

ಸಾವಿರದ ಒಂಭೈನೂರ ಮೂವತ್ತೊಂದನೆಯ ಜನವರಿ ಇಪ್ಪತ್ತಾರರಂದು ಜವಾಹರಲಾಲ ನೆಹರು, ಗಾಂಧೀಜಿ ಮೊದ ಲಾದ ಅನೇಕರು ಮುಂದಾಳುಗಳು ಸೆರೆಯಿಂದ ಬಿಡುಗಡೆ ಹೊಂದಿದರು. ಕೂಡಲೇ ಅವರು ಅಲ್ಲಹಾಬಾದಿಗೆ ಹಾಸಿಗೆ ಹಿಡಿದಿದ್ದ ಮೋತೀಲಾಲರ ಬಳಿ ಧಾವಿಸಿದರು. ಇವರ ಆಗಮನದಿಂದ ಕಾಯಿಲೆಯಿಂದ ನರಳುತ್ತಿದ್ದ ಅವರಿಗೆ ತುಂಬಾ ಸಂತೋಷವಾಯಿತು.

ಮೋತೀಲಾಲರ ಕೊನೆಯ ದಿನಗಳ ಕುರಿತು ಅವರ ಪುತ್ರಿ ಕೃಷ್ಣಾ ಹೀಗೆ ಬರೆಯುತ್ತಾರೆ:

“ಕೊನೆಯ ವರೆಗೂ ಅವರು ತನ್ನ ವಿನೋದವನ್ನು ಬಿಡ ಲಿಲ್ಲ. ಯಾವಾಗಲೂ ಅವರು ಗಾಂಧೀಜಿಯೊಡನೆ ವಿನೋದ ಮಾಡುತ್ತಿದ್ದರು. ಅಮ್ಮನೊಡನೆಯೂ ಆಗಾಗ, ‘ನಾನು ಮೊದಲು ಹೋಗುವುದೋ, ನೀನು ಮೊದಲು ಹೋಗುವುದದೋ?’ ಎಂದು

ಕೇಳುತ್ತಿದ್ದರು. ಆದರೆ ಅವರೆಂದೂ ಮರಣಕ್ಕೆ ಭಯಪಟ್ಟವರಲ್ಲ. ಅವರು ತನ್ನ ಜೀವಮಾನವನ್ನಿಡೀ ಹೋರಾಟಗಳಲ್ಲೇ ಕಳೆದರು; ಎಷ್ಟೋ ಸಲ ಹೋರಾಟಗಳಲ್ಲಿ ವಿಜಯವನ್ನೂ ಪಡೆದಿದ್ದರು. ಯಮಧರ್ಮರಾಯನನ್ನು ಕೂಡ ಹಾಗೆ ಬಿಡುವ ಹಾಗಿಲ್ಲ ಅವರು; ನಿರ್ಬಲರಾಗಿದ್ದರು ಕೂಡ ಅನೇಕ ದಿನಗಳ ವರೆಗೆ ಕಾದಿವರು. ಕೆಲವು ವರ್ಷಗಳಾದರೂ ಬದುಕಿ ಉಳಿಯಬೇಕೆಂಬ ಆಸೆ ಇತ್ತವರಿಗೆ. ಈ ಲೋಕದ ಸುಖವನ್ನು ಅನುಭವಿಸಬೇಕು ಎಂದಲ್ಲ ಈ ಆಸೆ; ತನ್ನ ಜೀವನದ ಧ್ಯೇಯಗಳಲ್ಲಿ ಕೆಲವಾದರೂ ಫಲಿಸುವುದನ್ನು ಕಣ್ಣಾರೆ ಕಾಣಬೇಕೆಂದು. ಆದರೆ ಅವರ ಯಾವ ಸಾಹಸವೂ ಪ್ರಯೋಜನವಾಗಲಿಲ್ಲ. ಕೊನೆಗೆ ಯಮರಾಯನೇ ವಿಜಯಿಯಾದನು."

ಮೋತೀಲಾಲ್ ನೆಹರು ದೇಶಕ್ಕಾಗಿ ಸರ್ವಸ್ವವನ್ನೂ ಧಾರೆಯೆರೆದ ಮಹಾ ತ್ಯಾಗಿ. ಅವರು ವಾಸಿಸುತ್ತಿದ್ದ "ಆನಂದ ಭವನ"ವನ್ನು ಕೂಡ ರಾಷ್ಟ್ರಸಭೆಗೆ ದಾನವಾಗಿ ಕೊಟ್ಟಿದ್ದರು. ಮುಂದೆ ಆದಕ್ಕೆ "ಸ್ವರಾಜ್ಯ ಭವನ" ಎಂದು ಹೆಸರು ಕೊಟ್ಟರು. ಒಂದು ದಿನ ಮೋತೀಲಾಲ್ ಗಾಂಧೀಜಿಯೊಡನೆ ಮಾತನಾಡುತ್ತಿದ್ದಾಗ, ರಾಷ್ಟ್ರಸಭೆಯ ಕಾರ್ಯ ಸಮಿತಿಯ ಸಭೆಯನ್ನು ಸ್ವರಾಜ್ಯ ಭವನದಲ್ಲಿ ಜರಗಿಸಬೇಕೆಂಬ ಆಶಯವನ್ನು ವ್ಯಕ್ತಪಡಿಸಿದರು. ಕಾರ್ಯ ಸಮಿತಿಯ ಹೆಚ್ಚಿನ ಸದಸ್ಯರೂ ಆಗ ಅಲ್ಲಿಯೇ ಇದ್ದರು. ಮೋತೀಲಾಲರು ಕೊನೆಗೆ ಹೇಳಿದ ಮಾತುಗಳಿವು: "ಭಾರತದ ಭವಿಷ್ಯವನ್ನು ಸ್ವರಾಜ್ಯ ಭವನದಲ್ಲಿ ನಿರ್ಧರಿಸಿರಿ. ನನ್ನ ಮುಂದೆಯೇ ಅದು ನಡೆಯಲಿ. ನಾನೂ ಅದರಲ್ಲಿ ಪಾಲುಗಾರನಾಗುವೆ. ನಾನು ಸಾಯಲೇ ಬೇಕೆಂದಿದ್ದರೆ ಸ್ವತಂತ್ರ ಭಾರತದ ಮಡಿಲಲ್ಲಿ ಸಾಯುವೆ."

ಮೋತೀಲಾಲ್‌ಜಿಯವರ ಪರಿಸ್ಥಿತಿ ದಿನದಿಂದ ದಿನಕ್ಕೆ ಗಂಟೆಯಿಂದ ಗಂಟೆಗೆ ಚಿಂತಾಜನಕವಾಗುತ್ತಾ ಬರುತ್ತಿತ್ತು. ಡಾಕ್ಟರರು ಎಕ್ಸ್‌ರೇ ಚಿಕಿತ್ಸೆಗಾಗಿ ಲಕ್ನೋವಿಗೆ ಹೋಗಬೇಕೆಂದು ಸಲಹೆಯಿತ್ತರು. ಆದರೆ ನೆಹರುಗಳಿಗೆ ಮನಸ್ಸಿರಲಿಲ್ಲ. ತಮ್ಮ ಕೊನೆಯ ದಿನ ಸಮೀಪಿಸುತ್ತಿದೆಯೆಂಬುದನ್ನು ಅವರು ಡಾಕ್ಟರರಿಗಿಂತ ಹೆಚ್ಚಾಗಿ ತಿಳಿದಿದ್ದರು. ತಮ್ಮ ಹೆಮ್ಮೆಯ, ಪ್ರೇಮದ 'ಆನಂದ ಭವನ'ದಲ್ಲೇ ಸಾಯಬೇಕೆಂಬ ಬಯಕೆ ಅವರಿಗೆ. ಆದರೆ ಗಾಂಧೀಜಿಯೂ ಒತ್ತಾಯಿಸಿದುದರಿಂದ ಅವರು ಲಕ್ನೋವಿಗೆ ಹೋಗಲು ಒಪ್ಪಬೇಕಾಯಿತು.

ಲಕ್ನೋವಿಗೆ ಹೋದೊಡನೆಯೇ ಪರಿಸ್ಥಿತಿ ಕೈತಪ್ಪಿತು. ಉಸಿರಾಡುವುದು ಕೂಡ ಕಷ್ಟವಾಯಿತು. ಅಂದೇ ಫೆಬ್ರವರಿ ಆರನೆಯ ರಾತ್ರಿ ಅವರು ನಿಧನ ಹೊಂದಿದರು.

ಮೋತಿಲಾಲ್‌ಜಿಯವರ ನಿಧನದ ಸುದ್ದಿ ಕಿಚ್ಚಿನಂತೆ ದೇಶದ ಮೂಲೆಮೂಲೆಯಲ್ಲಿ ಹಬ್ಬಿತು. ರಾಷ್ಟ್ರವೀರನ ಅಗಲುವಿಕೆಯಿಂದ ದೇಶಕ್ಕೆ ದೇಶವೇ ದುಃಖದಲ್ಲಿ ಮುಳುಗಿತು.

ಲಕ್ನೋವಿನಿಂದ ನೆಹರುಗಳ ಕಳೇಬರವನ್ನು ಅಲ್ಲಹಾಬಾದಿಗೆ ತರಲಾಯಿತು. ದಾರಿಯುದ್ದಕ್ಕೂ ಸಾವಿರಾರು ಜನರು ತಮ್ಮ ಮುಂದಾಳುವಿನ ಅಂತ್ಯದರ್ಶನಕ್ಕಾಗಿ ಅನ್ನ ನೀರು ಬಿಟ್ಟು ಕಾದಿದ್ದರು. 'ಆನಂದ ಭವನ'ದ ಮುಂದೆ ಹಿಂದೆಂದೂ ಕಾಣದ ಜನಸಾಗರ ಸೇರಿತ್ತು.

ಅಲ್ಲಹಾಬಾದಿನಲ್ಲಿ (ಪ್ರಯಾಗದಲ್ಲಿ) ಗಂಗಾ ಯಮುನಾ 'ಸಂಗಮ'ದಲ್ಲಿ ಮೋತಿಲಾಲ್‌ಜಿಯವರ ಅಂತ್ಯಕ್ರಿಯೆ ಜರಗಿತು. ಇತಿಹಾಸದಲ್ಲೇ ಕಾಣದ ಅಪೂರ್ವ ಜನಸಂದಣಿ ಅಲ್ಲಿ ನೆರೆದಿತ್ತು.